ಸಭೆ, ಸಮಾರಂಭ, ಜಾತ್ರೋತ್ಸವ,
ನೇಮೋತ್ಸವ, ಮದುವೆ ಹಾಗೂ ಇನ್ನಿತರ
ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996

# ಅಮರ ಸುಳ್ಯ ಸುದ್ದಿ

AMARA SULLIA SUDDHI

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ

Regd.No.PTR/126/2025-27
Licenced to Post under WPP
No. SK/WPP/PTR/156/2025-27

ಪ್ರಧಾನ ಸಂಪಾದಕರು : ಮುರಳೀಧರ ಅಡ್ಡನಪಾರೆ Email: amarasuddi@gmail.com Website : www.amarasuddi.com

ಸಭೆ, ಸಮಾರಂಭ, ಜಾತ್ರೋತ್ಸವ,
ನೇಮೋತ್ಸವ, ಮದುವೆ ಹಾಗೂ ಇನ್ನಿತರ
ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996

Mob : 9449387044, Off. : 7338248044
Facebook : Amarasullia Suddi

RNI No. KAR KAN / 2012/ 49234 | ಸಂಪುಟ –14 | ಸಂಚಿಕೆ – 21 | 2025 ಎ.11ರಿಂದ ಎ.17 ರವರೆಗೆ | Posted at SULLIA M.D.G. ON 11-04-2025 | ಪುಟ–6 | ಬೆಲೆ: ರೂ. 4.00

## ಕೊಲ್ಲಮೊಗ್ರು–ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣಾ ಫಲಿತಾಂಶ ಘೋಷಿಸಲು ಆದೇಶಿಸಿದ ಕೋರ್ಟ್ – ಶೀಘ್ರ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಕೊಲ್ಲಮೊಗ್ರು–ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಆಡಳಿತ ಮಂಡಳಿಗೆ ಜ.19 ರಂದು ಚುನಾವಣೆ ನಡೆದಿದ್ದು, ಚುನಾವಣೆಯಲ್ಲಿ ಕೋರ್ಟ್ ಮುಖಾಂತರ ಮತದಾನದ ಹಕ್ಕನ್ನು ಪಡೆದವರೂ ಮತ ಚಲಾವಣೆ ಮಾಡಿದ್ದು, ನ್ಯಾಯಾಲಯದ ಮುಂದಿನ ಆದೇಶದವರೆಗೆ ಫಲಿತಾಂಶ ಘೋಷಣೆ ಮಾಡಬಾರದೆಂಬ ಆದೇಶ ಇದ್ದುದರಿಂದ ಫಲಿತಾಂಶ ಘೋಷಣೆಯಾಗದೇ ಇದ್ದು, ಬಳಿಕ ಸಂಘಕ್ಕೆ ಆಡಳಿತಾಧಿಕಾರಿಗಳ ನೇಮಕವಾಗಿತ್ತು. ಚಲಾವಣೆಗೊಂಡ ಮತಗಳಲ್ಲಿ ತಿರಿಕೊಂಡವರ ಹೆಸರುಗಳೂ ಹಾಗೂ ಡಿಫಾಲ್ಟರ್‌ಗಳೂ ಇದ್ದುದರಿಂದ ಫಲಿತಾಂಶ ಘೋಷಣೆಗೆ ಆಕ್ಷೇಪ ವ್ಯಕ್ತಪಡಿಸಿ ಒಂದು ತಂಡ ನ್ಯಾಯಾಲಯದ ಮೊರೆ ಹೋಗಿದ್ದು, ಫಲಿತಾಂಶ ಘೋಷಿಸಬೇಕೆಂದು ವಿಜೇತರ ತಂಡ ಕೋರ್ಟ್ ಮೊರೆ ಹೋಗಿತ್ತು. ಈ ಹಿನ್ನಲೆಯಲ್ಲಿ ವಿಚಾರಣೆ ನಡೆಸಿದ ಹೈಕೋರ್ಟ್ ಚುನಾವಣಾ ಫಲಿತಾಂಶ ಘೋಷಿಸಲು ಆದೇಶ ನೀಡಿರುವುದಾಗಿ ತಿಳಿದುಬಂದಿದೆ. ಏ.05 ರಂದು ಕೋರ್ಟ್ ಆದೇಶದ ಪ್ರತಿ ಸಹಕಾರಿ ಇಲಾಖೆಯ ಡಿ.ಆರ್ ಅವರ ಕೈ ಸೇರಿರುವುದಾಗಿ ತಿಳಿದುಬಂದಿದ್ದು, ಆದೇಶ ಪ್ರತಿ ಕೈ ಸೇರಿದ ಏಳು ದಿನದೊಳಗೆ ಫಲಿತಾಂಶ ಘೋಷಣೆ ಮಾಡಲು ತೀರ್ಪಿನಲ್ಲಿ ತಿಳಿಸಲಾಗಿದೆ.

## ಏ 12: ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಶತಮಾನೋತ್ತರ ದಶಮಾನೋತ್ಸವ ಮತ್ತು ನೂತನ ಕಟ್ಟಡ 'ಸಿ.ಎ. ಬ್ಯಾಂಕ್ ಕಾಂಪ್ಲೆಕ್ಸ್' ಲೋಕಾರ್ಪಣೆ ಸಮಾರಂಭ



ಸುಳ್ಯ ಪ್ರಾ. ಕೃ. ಪ ಸಹಕಾರ ಸಂಘ ನಿ., ಶತಮಾನೋತ್ತರ ದಶಮಾನೋತ್ಸವ ಮತ್ತು ನೂತನ ಕಟ್ಟಡ ' ಸಿ. ಎ. ಬ್ಯಾಂಕ್ ಕಾಂಪ್ಲೆಕ್ಸ್ ' ಲೋಕಾರ್ಪಣೆ ಸಮಾರಂಭವು ಏಪ್ರಿಲ್ 12 ರಂದು ನಡೆಯಲಿದೆ. ದ. ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಇದರ ಅಧ್ಯಕ್ಷರಾದ ಸಹಕಾರ ರತ್ನ ಡಾ. ಎಂ. ಎನ್ ರಾಜೇಂದ್ರ ಕುಮಾರ್ ರವರು ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಸಭಾ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಕ್ಯಾ. ಬ್ರಿಜೇಶ್ ಚೌಟ ರವರು ನೆರವೇರಿಸಲಿದ್ದಾರೆ. ಸುಳ್ಯ ಪ್ರಾ. ಕೃ. ಪ. ಸ. ಸಂಘದ ಅಧ್ಯಕ್ಷರಾದ ಶ್ರೀ ವಿಕ್ರಮ್ ಎ.ವಿ ಈ ಸಮಾರಂಭದ ಅಧ್ಯಕ್ಷತೆಯನ್ನು (4ನೇ ಪುಟಕ್ಕೆ)

## ಆಯುರ್ವೇದ ಪದವಿ ವಿಭಾಗದ ಅಧ್ಯಯನ ಮಂಡಳಿಗೆ ಚೇರ್ ಮ್ಯಾನ್ ಆಗಿ ನೇಮಕವಾದ ಡಾ. ಲೀಲಾಧರ್ ಡಿ.ವಿ. ಯವರಿಗೆ ಸನ್ಮಾನ



ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ ಬೆಂಗಳೂರು ಇದರ ರಾಜ್ಯ ನಿರ್ದೇಶಕರಾದ ಸಹಕಾರಿ ರತ್ನ ಚಂದ್ರ ಕೋಲ್ಚಾರ್ ರವರಿಂದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕರ್ನಾಟಕ, ಬೆಂಗಳೂರು ಇದರ ಆಯುರ್ವೇದ ಪದವಿ ವಿಭಾಗದ ಅಧ್ಯಯನ ಮಂಡಳಿಗೆ ಚೇರ್ ಮ್ಯಾನ್ ಆಗಿ ನೇಮಕಗೊಂಡಿರುವ ಕೆವಿಜಿ ಆಯುರ್ವೇದ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಲೀಲಾಧರ್ ಡಿ. ವಿ ಯವರನ್ನು ಅಭಿನಂದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿ ರತ್ನ ಚಂದ್ರ ಕೋಲ್ಚಾರ್ ಅಭಿನಂದನಾ ಸಮಿತಿಯ ಕೋಶಾಧಿಕಾರಿ ಕೆ. ಟಿ ವಿಶ್ವನಾಥ, ಜೊತೆ ಕಾರ್ಯದರ್ಶಿಗಳಾದ ಸುಪ್ರೀತ್ ಮೋಂಟಡ್ಕ, ಪ್ರೀತಮ್ ಕೇರ್ಪಳ, ಪಾತಿಕಲ್ಲು ಕನ್ಸ್ಟ್ರಕ್ಷನ್ ಮಾಲಕ ಮಿಲನ್ ಪಾತಿಕಲ್ಲು ಉಪಸ್ಥಿತರಿದ್ದರು.

## ಎ.12 ರಿಂದ ರಂಗಮನೆಯಲ್ಲಿ ಚಿಣ್ಣರ ಮೇಳ ಆರಂಭ – ಶಿಬಿರದ ಸಮಾರೋಪದಲ್ಲಿ ವೇದಿಕೆಯೇರಿ ನಟಿಸಲಿರುವ 150 ಮಕ್ಕಳು




ಸುಳ್ಯ ಹಳೆಗೇಟಿನಲ್ಲಿರುವ ರಂಗಮನೆ ಸಾಂಸ್ಕೃತಿಕ ಕಲಾ ಕೇಂದ್ರ(ರಿ.)ದ ಆಶ್ರಯದಲ್ಲಿ ಎಪ್ರಿಲ್ 12 ರಿಂದ 19 ರ ವರೆಗೆ ಅಭಿನಯ ಪ್ರಧಾನ ಚಿಣ್ಣರಮೇಳವನ್ನು ಏರ್ಪಡಿಸಲಾಗಿದೆ . ಎ.12 ರಂದು ಪೂ.9.30 ಕ್ಕೆ ಮಕ್ಕಳ ಬೇಸಿಗೆ ಶಿಬಿರವನ್ನು ಹಿರಿಯ ಸಾಹಿತಿಗಳು ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ.ಬಿ.ಪ್ರಭಾಕರ ಶಿಶಿಲರು ಉದ್ಘಾಟಿಸಲಿದ್ದಾರೆ. ಸುಳ್ಯ ನಗರ ಪಂಚಾಯತ್ ಉಪಾಧ್ಯಕ್ಷರಾದ ಬುದ್ದ ನಾಯ್ಕ್, ದಾಮಾಯಣ ಚಲನಚಿತ್ರ ಖ್ಯಾತಿಯ ನಟ, ನಿರ್ದೇಶಕ ಶ್ರೀಮುಖ ಸುಳ್ಯ ಹಾಗೂ ಭಾವ ತೀರ ಯಾನ ಚಲನಚಿತ್ರದ ನಿರ್ದೇಶಕ ,ಸಂಗೀತ ಸಂಯೋಜಕ ಮಯೂರ್ ಅಂಬೆಕಲ್ಲು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಯೋಗ, ಯಕ್ಷಗಾನ, ಸಂಗೀತ, ಭರತನಾಟ್ಯ, ನಾಟಕ ಇತ್ಯಾದಿಗಳ ಬಹುಮುಖ ಪ್ರತಿಭೆ ಕು। ಹಾರ್ದಿಕ ಕೆರೆಮೂಲೆ ಇವಳನ್ನು ರಂಗಮನೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು.(4ನೇ ಪುಟಕ್ಕೆ)

## ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವರ್ಷಾವಧಿ ಜಾತ್ರೋತ್ಸವ ಏ 17 ರಂದು ಬ್ರಹ್ಮರಥೋತ್ಸವ



ಸುಪ್ರಸಿದ್ಧ ಶ್ರೀ ಕ್ಷೇತ್ರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವರ್ಷಾವಧಿ ಜಾತ್ರೋತ್ಸವವು ಏ.10 ರಿಂದ 20 ರವರೆಗೆ ನಡೆಯಲಿದ್ದು. ಏ.10 ರಂದು ಧ್ವಜಾರೋಹಣ ನಡೆಯಲಿದ್ದು 13 ರಂದು ಮೇಷ ಸಂಕ್ರಮಣ, 14 ರಂದು ಸೌರಮಾನ ಯುಗಾದಿ ವಿಶೇಷ ದಿನವಾಗಿರುತ್ತದೆ. 17 ರಂದು ಬೆಳಿಗ್ಗೆ ದರ್ಶನಬಲಿ, ಮದ್ಯಾಹ್ನ ಅನ್ನಸಂತರ್ಪಣೆ ರಾತ್ರಿ 7.30 ಕ್ಕೆ ಸಿಡಿಮದ್ದು ಪ್ರದರ್ಶನ ಹಾಗೂ ಬ್ರಹ್ಮರಥೋತ್ಸವ ನಡೆಯಲಿದೆ.

ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.
ನಂ. 1200, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಎದುರು, ಸುಳ್ಯ, ದಕ್ಷಿಣ ಕನ್ನಡ
ಶತಮಾನೋತ್ತರ ದಶಮಾನೋತ್ಸವ
ಮತ್ತು
ನೂತನ ಕಟ್ಟಡ 'ಸಿ. ಎ. ಬ್ಯಾಂಕ್ ಕಾಂಪ್ಲೆಕ್ಸ್' ಲೋಕಾರ್ಪಣೆ ಸಮಾರಂಭ
ದಿನಾಂಕ : 12-04-2025 ಶನಿವಾರ
ಸಮಯ : ಪೂರ್ವಾಹ್ನ ಗಂಟೆ 9-30



ವಾಣಿಜ್ಯ ಸಂಕೀರ್ಣದ ಉದ್ಘಾಟಕರು
ಕು। ಭಾಗೀರಥಿ ಮುರುಳ್ಯ
ಮಾನ್ಯ ಶಾಸಕರು, ಸುಳ್ಯ ವಿಧಾನಸಭಾ ಕ್ಷೇತ್ರ
ಸಭಾ ಕಾರ್ಯಕ್ರಮದ ಉದ್ಘಾಟಕರು
ಶ್ರೀ ಕ್ಯಾ. ಬ್ರಿಜೇಶ್ ಚೌಟ
ಮಾನ್ಯ ಲೋಕಸಭಾ ಸದಸ್ಯರು, ಮಂಗಳೂರು, ದ. ಕ. ಜಿಲ್ಲೆ
ನೂತನ ಕಟ್ಟಡದ ಉದ್ಘಾಟಕರು
ಸಹಕಾರ ರತ್ನ ಡಾ। ಎಂ ಎನ್ ರಾಜೇಂದ್ರ ಕುಮಾರ್
ಅಧ್ಯಕ್ಷರು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಬೆಂಗಳೂರು
ರಾಷ್ಟ್ರೀಯ ಅಧ್ಯಕ್ಷರು, ನ್ಯಾಷನಲ್ ಪ್ರೆಸ್ ಕೌನ್ಸಲ್ ಆಫ್ ಇಂಡಿಯಾ ಎಸ್‌ಸಿಆರ್
ಗೌರವಾಧ್ಯಕ್ಷರು, ಶತಮಾನೋತ್ತರ ದಶಮಾನೋತ್ಸವ ಸಮಿತಿ, ಸುಳ್ಯ ಪ್ರಾ.ಕೃ.ಸ.ಸಂಘ ನಿ.
ಆಡಳಿತ ಮಂಡಳಿಯ ಸಭಾಭವನ ಉದ್ಘಾಟಕರು
ಶ್ರೀ ನಳಿನ್ ಕುಮಾರ್ ಕಟೀಲ್
ಮಾಜಿ ಲೋಕಸಭಾ ಸದಸ್ಯರು, ಮಂಗಳೂರು
ಭದ್ರತಾ ಕೊಠಡಿ ಮತ್ತು ಲಿಫ್ಟ್ ಉದ್ಘಾಟಕರು
ಶ್ರೀ ಡಿ. ವಿ. ಸದಾನಂದ ಗೌಡ
ಮಾಜಿ ಕೇಂದ್ರ ಸಚಿವರು,
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಅಧ್ಯಕ್ಷತೆ : ಶ್ರೀ ವಿಕ್ರಮ್ ಎ. ವಿ. ಅಧ್ಯಕ್ಷರು ಪ್ರಾ.ಕೃ.ಸ.ಸಂಘ ನಿ.
ಮುಖ್ಯ ಅತಿಥಿಗಳು
ಶ್ರೀ ಎಸ್. ಅಂಗಾರ
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಡಾ। ಕೆ. ವಿ. ಚಿದಾನಂದ
ಅಧ್ಯಕ್ಷರು, ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ (ರಿ.) ಸುಳ್ಯ
ಡಾ। ಕೆ. ವಿ. ರೇಣುಕಾ ಪ್ರಸಾದ್
ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ (ರಿ.), ಬೆಂಗಳೂರು
ಶ್ರೀ ರಮೇಶ್ ಎಚ್. ಎನ್.
ಸಹಕಾರ ಸಂಘಗಳ ಉಪನಿಬಂಧಕರು ಮಂಗಳೂರು ದ. ಕ. ಜಿಲ್ಲೆ
ಶ್ರೀ ಎಸ್. ಎಂ. ರಘು
ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಪುತ್ತೂರು ಉಪವಿಭಾಗ
ಶ್ರೀ ಶಶಿಕುಮಾರ್ ರೈ ಬಾಲ್ಯೊಟ್ಟು
ಅಧ್ಯಕ್ಷರು, ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ, ಮಂಗಳೂರು
ನಿರ್ದೇಶಕರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು
ಶ್ರೀ ಎಸ್. ಎನ್. ಮನ್ಮಥ
ನಿರ್ದೇಶಕರು, ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು
ಶ್ರೀಮತಿ ಶಶಿಕಲಾ ಎ. ನೀರಬಿದಿರೆ
ಅಧ್ಯಕ್ಷರು, ನಗರ ಪಂಚಾಯತ್ ಸುಳ್ಯ
ಶ್ರೀಮತಿ ದೇವಕಿ ವಿಷ್ಣುನಗರ
ಅಧ್ಯಕ್ಷರು, ಗ್ರಾಮ ಪಂಚಾಯತ್ ಅಜ್ಜಾವರ
ಸರ್ವರಿಗೂ ಸ್ವಾಗತ ಬಯಸುವ
ಶ್ರೀ ಸುದರ್ಶನ್ ಎಸ್. ಪಿ.
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಶ್ರೀ ಚಂದ್ರಶೇಖರ ಸೋಣಂಗೇರಿ
ಉಪಾಧ್ಯಕ್ಷರು
ಶ್ರೀ ವಿಕ್ರಮ್ ಎ. ವಿ.
ಅಧ್ಯಕ್ಷರು
ನಿರ್ದೇಶಕರು
ಶ್ರೀ ರಾಮಚಂದ್ರ ಎನ್ ಎ.,
ಶ್ರೀ ವಾಸುದೇವ ನಾಯಕ್ ಪುತ್ತಿಲ
ಶ್ರೀ ಚಂದ್ರಶೇಖರ ಡಿ. ಕೆ.,
ಶ್ರೀ ಪ್ರಭೋದ್ ಶೆಟ್ಟಿ ಮೇನಾಲ
ಶ್ರೀಮತಿ ನವ್ಯ ಚಂದ್ರಶೇಖರ ಅಡ್ಪಂಗಾಯ
ಶ್ರೀ ಬಾಲಗೋಪಾಲ ಸೇರ್ಕಜೆ ಮೋಂಟಡ್ಕ
ಶ್ರೀ ವೆಂಕಟ್ರಮಣ ಮುಳ್ಯ
ಶ್ರೀಮತಿ ಹರಿಣಾಕ್ಷಿ ರೈ ಬೇಲ್ಯ
ಶ್ರೀ ಹೇಮಂತ ಕುಮಾರ್
ಶ್ರೀ ಶಿವರಾಮ ಕೇರ್ಪಳ
ಶ್ರೀ ಕೇಶವ ಸಿ. ಎ. ಹೊಸಗದ್ದೆ
ಶ್ರೀ ಎಸ್. ಎನ್. ಮನ್ಮಥ
(ದ.ಕ.ಜಿ.ಕೇಂದ್ರ ಸಹಕಾರಿ ಬ್ಯಾಂಕ್ ಪ್ರತಿನಿಧಿ)
ಮತ್ತು ಸಿಬ್ಬಂದಿ ವರ್ಗ
ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ – ಸುಳ್ಯ

ಕರ್ನಾಟಕ ಸರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮದಾಯ ದತ್ತಿಗಳ ಇಲಾಖೆ
ಶ್ರೀ ಕ್ಷೇತ್ರ ಪುತ್ತೂರು
ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ
ಪುತ್ತೂರು 574201 ದ.ಕ ಜಿಲ್ಲೆ, ದೂ: 08257-230511, ಮೊ: 9482801611
E Mail : puttursreemahalingeshwara@gmail.com



ವರ್ಷಾವಧಿ ಜಾತ್ರೆ
ದಿನಾಂಕ: 10-4-2025 ರಿಂದ 20-04-2025ರವರೆಗೆ
ಪುತ್ತೂರು ಮಹತೋಬಾರ ಶ್ರೀ ಮಹಾಲಿಂಗೇಶ್ವರ ದೇವರ ದಿವ್ಯ ಸನ್ನಿಧಿಯಲ್ಲಿ ವರ್ಷಂಪ್ರತಿ ಜರಗುವ ಉತ್ಸವಾದಿಗಳಿಗೆ ತಾವೆಲ್ಲರೂ ಚಿತ್ತೈಸಿ, ಗಂಧ ಪ್ರಸಾದ ಸ್ವೀಕರಿಸಿ, ಶ್ರೀ ದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,
ಈಶ್ವರ ಭಟ್ ಪಂಜಿಗುಡ್ಡೆ, ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ
ವಸಂತ ಕುಮಾರ್ ಕೆದಿಲಾಯ, ಪ್ರಧಾನ ಅರ್ಚಕರು ಮತ್ತು ಸದಸ್ಯರು
ಸದಸ್ಯರುಗಳಾದ : ಬಿ ಈಶ್ವರ ಬೆಡೇಕರ್, ಕೃಷ್ಣವೇಣಿ, ನಳಿನಿ ಪಿ ಶೆಟ್ಟಿ, ದಿನೇಶ್ ಕುಲಾಲ್ ಪಿ.ವಿ., ಮಹಾಬಲ ರೈ ಒಳತ್ತಡ್ಕ, ಸುಭಾಶ್ ರೈ ಬೆಳ್ಳಿಪ್ಪಾಡಿ, ವಿನಯ ಕುಮಾರ್ ಸುವರ್ಣ ಬಿ.
ಕೆ.ವಿ.ಶ್ರೀನಿವಾಸ
ಕಾರ್ಯನಿರ್ವಾಹಣಾಧಿಕಾರಿ
ತಂತ್ರಿಗಳು, ಅರ್ಚಕರು
ಹಾಗೂ ನೌಕರವೃಂದ ಹಾಗೂ
ಊರಿನ ಎಲ್ಲಾ ಭಕ್ತಾಭಿಮಾನಿಗಳು
ಉತ್ಸವಗಳ ವಿವರ
10.04.2025 ಗುರುವಾರ – ಬೆಳಿಗ್ಗೆ ಧ್ವಜಾರೋಹಣ, ರಾತ್ರಿ ಅಂಕುರಾರ್ಪಣ, ಬಲಿ ಹೊರಟು ಉತ್ಸವ, ಬೊಳುವಾರು, ಶ್ರೀರಾಮ ಪೇಟೆ ಕಾರ್ಜಾಲೂ, ರಕ್ತೇಶ್ವರಿ ದೇವಸ್ಥಾನ, ಕಲ್ಲೇಗ, ಕರ್ಮಲ ಸವಾರಿ
11.04.2025 ಶುಕ್ರವಾರ – ಮದ್ಯಾಹ್ನ ಅನ್ನ ಸಂತರ್ಪಣೆ: ಅಧಿಕಾರಿ ಮತ್ತು ಸಿಬ್ಬಂದಿ ವರ್ಗ , ಕ.ರ.ರಾ.ಸಾ.ನಿ, ಪುತ್ತೂರು ವಿಭಾಗ, ರಾತ್ರಿ: ಉತ್ಸವ, ನೆಲ್ಲಿಕಟ್ಟೆ, ಸಾಲ್ಮರ, ಸೂತ್ರಬೆಟ್ಟು ಸವಾರಿ
12.04.2025 ಶನಿವಾರ – ರಾತ್ರಿ: ಉತ್ಸವ, ಶಿವಪೇಟೆ, ತೆಂಕಿಲ, ಕೊಟ್ಟಿಬೆಟ್ಟು ಏಳ್ನಾಡುಗುತ್ತು, ಬೈಪಾಸ್ ಹೆದ್ದಾರಿ ರಾಧಾಕೃಷ್ಣ ಮಂದಿರ ಸವಾರಿ
13.04.2025 ಆದಿತ್ಯವಾರ–ಮೇಷ ಸಂಕ್ರಮಣ ರಾತ್ರಿ: ಉತ್ಸವ, ಪೇಟೆ ಸವಾರಿ, ಕೋರ್ಟು ರಸ್ತೆ ,ಸೈನಿಕ ಭವನ ರಸ್ತೆ, ಬಪ್ಪಳಿಗೆ, ಉರ್ಲಾಂಡಿ, ಬೊಳ್ವಾರು ಬೈಲ್ ಸವಾರಿ
14.04.2025 ಸೋಮವಾರ – ಸೌರಮಾನ ಯುಗಾದಿ (ವಿಷು) ಬೆಳಿಗ್ಗೆ: ಉತ್ಸವ, ವಸಂತ ಕಟ್ಟೆಪೂಜೆ , ರಾತ್ರಿ : ಉತ್ಸವ, ಬಂಡಿ ಉತ್ಸವ (ಚಂದ್ರ ಮಂಡಲ), ಕೊಂಬೆಟ್ಟು, ಬೊಳುವಾರು, ಹಾರಾಡಿ, ತಾಳೆಪ್ಪಾಡಿ, ದ್ರಾವಿಡ ಬ್ರಾಹ್ಮಣ ಹಾಸ್ಟೆಲ್, ಸಕ್ಕರೆ ಕಟ್ಟೆ ಸವಾರಿ
15.04.2025 ಮಂಗಳವಾರ– ರಾತ್ರಿ ಉತ್ಸವ, ಬನ್ನೂರು, ಅಶೋಕ ನಗರ, ರೈಲ್ವೆ ಮಾರ್ಗ ಸವಾರಿ
16.04.2025 ಬುದವಾರ– ಬೆಳಿಗ್ಗೆ 8.30 ರಿಂದ ತುಲಾಭಾರ ಸೇವೆ, ರಾತ್ರಿ ಉತ್ಸವ, ಬಲ್ನಾಡು ಶ್ರೀ ದಂಡನಾಯಕ–ಉಳ್ಳಾಲ್ತಿ ದೈವಗಳ ಮಾಮೂಲು ಪ್ರಕಾರ ಬರುವ ಕಿರುವಾಳು, ಪಾಲಕಿ ಉತ್ಸವ, ಸಣ್ಣ ರಥೋತ್ಸವ, ಕೆರೆ ಉತ್ಸವ, ತೆಪ್ಪೋತ್ಸವ
17.04.2025 ಗುರುವಾರ – ಬೆಳಿಗ್ಗೆ ಉತ್ಸವ, ವಸಂತ ಕಟ್ಟೆಪೂಜೆ, ದರ್ಶನ ಬಲಿ, ಬಟ್ಟಲು ಕಾಣಿಕೆ ಅನ್ನಸಂತರ್ಪಣೆ, ರಾತ್ರಿ 7.30 ರ ನಂತರ ಉತ್ಸವ, ಸಿಡಿಮದ್ದು ಪ್ರದರ್ಶನ (ಪುತ್ತೂರು ಬೆಡಿ), ಬ್ರಹ್ಮ ರಥೋತ್ಸವ, ಬಂಗಾರ್ ಕಾಯರ್ ಕಟ್ಟೆ ಸವಾರಿ, ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಬೀಳ್ಕೊಡುಗೆ, ಶ್ರೀ ಭೂತಬಲಿ, ಶಯನ
18.04.2025 ಶುಕ್ರವಾರ– ಬೆಳಿಗ್ಗೆ 7.30 ಕ್ಕೆ ಕವಾಟೋದ್ಘಾಟನೆ,8.30 ರಿಂದ ತುಲಾಭಾರ ಸೇವೆ, ಸಂಜೆ 3.30ಕ್ಕೆ ವೀರಮಂಗಲ ಅವಭೃತ ಸ್ನಾನಕ್ಕೆ ಸವಾರಿ
19.04.2025 ಶನಿವಾರ– ಬೆಳಿಗ್ಗೆ ಧ್ವಜಾವರೋಹಣ, ರಾತ್ರಿ ಚೂರ್ಣೋತ್ಸವ ವಸಂತ ಪೂಜೆ ಪ್ರಾರಂಭ, ಹುಲಿಭೂತ, ರಕ್ತೇಶ್ವರಿ ನೇಮ
20.04.2025 ಆದಿತ್ಯವಾರ–ಸಂಪ್ರೋಕ್ಷಣೆ, ರಾತ್ರಿ ಮಂತ್ರಾಕ್ಷತೆ,ಅಂಜಣತ್ತಾಯ, ಪಂಜುರ್ಲಿ ವಗೈರೆ ದೈವಗಳ ನೇಮ

# ಮುರೂರು ಶ್ರೀಕೃಷ್ಣ ಮಂದಿರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಒಂದೂವರೆ ಲಕ್ಷ ಅನುದಾನ ಮಂಜೂರು




ಮಂಡೆಕೋಲು ಗ್ರಾಮದ ಮುರೂರು ದ್ವಾರಕಾನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಕೃಷ್ಣ ಭಜನಾ ಮಂದಿರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ರೂಪಾಯಿ ಒಂದೂವರೆ ಲಕ್ಷ ಧನಸಹಾಯ ಮಂಜೂರಾಗಿದ್ದು ಇದರ ಮಂಜೂರಾತಿ ಪತ್ರವನ್ನು ತಾಲೂಕು ಯೋಜನಾಧಿಕಾರಿಗಳಾದ ಮಾಧವ ಗೌಡರವರು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಾಧವ ಗೌಡರವರು ಶ್ರೀ ಕ್ಷೇತ್ರ ಧರ್ಮಸ್ಥಳ ಚತುರ್ದಾನಗಳಿಗೆ ಹೆಸರುವಾಸಿಯಾಗಿದ್ದು ಕಳೆದ 800 ವರ್ಷಗಳಿಂದ ಕ್ಷೇತ್ರದಲ್ಲಿ ಅನ್ನದಾನ, ವಿದ್ಯಾದಾನ, ಅಭಯದಾನಗಳ ಮೂಲಕ ರಾಜ್ಯದಾದ್ಯಂತ ಮಠ ಮಂದಿರ, ದೇವಸ್ಥಾನಗಳು, ಶಾಲೆ, ಅಂಗನವಾಡಿ, ಹಾಲು ಉತ್ಪಾದಕರ ಸಹಕಾರ ಸಂಘ, ಹಿಂದೂ ರುದ್ರಭೂಮಿ ಸೇರಿದಂತೆ ಸಮಾಜದ ಬೇರೆ ಬೇರೆ ಕ್ಷೇತ್ರಗಳಿಗೆ ನೂರಾರು ಕೋಟಿಯ ದಾನಗಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ಮಾಡುತ್ತಿದೆ. ಸುಳ್ಯ ತಾಲೂಕು ಒಂದರಲ್ಲೇ ವರ್ಷವೊಂದಕ್ಕೆ ಹತ್ತಾರು ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಇದಕ್ಕಾಗಿ ನಾವು ವೀರೇಂದ್ರ ಹೆಗ್ಗಡೆಯವರಿಗೆ ಕೃತಜ್ಞರಾಗಬೇಕಾಗಿದೆ ಎಂದರಲ್ಲದೆ ಕ್ಷೇತ್ರದಿಂದ ಸಿಗುವ ಸವಲತ್ತುಗಳ ಬಗ್ಗೆ ವಿಸ್ತೃತವಾದ ಮಾಹಿತಿಯನ್ನು ನೀಡಿದರು.

ಕೇಂದ್ರ ಒಕ್ಕೂಟದ ಅಧ್ಯಕ್ಷರಾದ ಸುರೇಶ್ ಕಣೆಮರಡ್ಕ ಮಾತನಾಡಿ ನಮ್ಮ ಗ್ರಾಮವೊಂದಕ್ಕೆ ಕಳೆದ ಎರಡು ವರ್ಷಗಳಲ್ಲಿ ದೇವಸ್ಥಾನ, ಶಾಲೆ, ಹಾಲು ಉತ್ಪಾದಕರ ಸಹಕಾರ ಸಂಘ, ರುದ್ರಭೂಮಿ, ಭಜನಾ ಮಂದಿರ, ದೈವಸ್ಥಾನ ಮೊದಲಾಗಿ ಲಕ್ಷಾಂತರ ಮೊತ್ತದ ಅನುದಾನ ಶ್ರೀ ಕ್ಷೇತ್ರದಿಂದ ನೀಡಿದ್ದಾರೆ. ಸರಕಾರವೊಂದು ಮಾಡದ ಕೆಲಸಗಳನ್ನು ಇವತ್ತು ಧರ್ಮಸ್ಥಳ ಕ್ಷೇತ್ರದ ವತಿಯಿಂದ ವೀರೇಂದ್ರ ಹೆಗಡೆಯವರು ಮಾಡುತ್ತಿದ್ದಾರೆ. ಅದಕ್ಕಾಗಿ ಈ ಗ್ರಾಮದ ಜನರ ಪರವಾಗಿ ಅವರಿಗೂ ಕ್ಷೇತ್ರದ ಯೋಜನೆಯನ್ನು ಸಮರ್ಪಕವಾಗಿ ಒದಗಿಸುವಲ್ಲಿ ಪ್ರಾಮಾಣಿಕ ಕೆಲಸ ನಿರ್ವಹಿಸುವ ಯೋಜನೆಯ ಎಲ್ಲಾ ಅಧಿಕಾರಿ ವೃಂದಕ್ಕೂ ಕಾರ್ಯಕರ್ತರಿಗೂ ಕೃತಜ್ಞತೆಯನ್ನು ಸಲ್ಲಿಸುವುದಾಗಿ ನುಡಿದರು. ಮಂದಿರದ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಜಿತ್ ಮಾತನಾಡಿ ಅನುದಾನವನ್ನು ಒದಗಿಸಿದ ಕ್ಷೇತ್ರಕ್ಕೂ ಹಾಗೂ ಅನುದಾನ ಒದಗಿಸಲು ಸಹಕರಿಸಿದ ಯೋಜನೆಯ ಅಧಿಕಾರಿ ವೃಂದ ಮತ್ತು ಎಲ್ಲಾ ಸಿಬ್ಬಂದಿಗಳಿಗೆ ಮಂದಿರದ ಪರವಾಗಿ ಧನ್ಯವಾದ ಅರ್ಪಿಸಿದರು.

ಈ ಸಂದರ್ಭದಲ್ಲಿ ಪ್ರಗತಿಬಂಧು ಸ್ವಸಹಾಯ ಒಕ್ಕೂಟಗಳ ತಾಲೂಕು (ಕೇಂದ್ರ)ಅಧ್ಯಕ್ಷರಾದ ಸುರೇಶ್ ಕಣೆಮರಡ್ಕ, ಮಂದಿರದ ಆಡಳಿತ ಮಂಡಳಿ ಅಧ್ಯಕ್ಷ ಚಂದ್ರಜಿತ್ ಮಾವಂಜಿ, ಪ್ರತಿಷ್ಠಾ ಸಮಿತಿ ಅಧ್ಯಕ್ಷರಾದ ಡಿ.ವಿ. ಸುರೇಶ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಕುಶಾಲಪ್ಪ ಗೌಡ, ವಿವಿಧ ಸಮಿತಿಗಳ ಪದಾಧಿಕಾರಿಗಳಾದ ಸತ್ಯನಾರಾಯಣ ಶರ್ಮ, ಸುದರ್ಶನ್ ಮುರೂರು, ವಿಶ್ವನಾಥ ಕೊಳಂಬೆ, ಮಧುಸೂದನ ಮುರೂರು, ವಸಂತ, ರಾಜೀವ ಮುರೂರು, ಸಂದೇಶ್ ಮುರೂರು, ಯೋಜನೆಯ ವಲಯ ಮೇಲ್ವಿಚಾರಕರಾದ ಕಾಂತಿಕಾಮಣಿ, ಸೇವಾಪ್ರತಿನಿಧಿ ವೇದಾವತಿ ಮೊದಲಾದವರು ಉಪಸ್ಥಿತರಿದ್ದರು. ಮೇಲ್ವಿಚಾರಕಿ ಕಾಂತಿಕಾಮಣಿ ಸ್ವಾಗತಿಸಿ, ವೇದಾವತಿ ಧನ್ಯವಾದ ಸಮರ್ಪಿಸಿದರು.

# ಕೆದಂಬಾಡಿ ರಾಮಯ್ಯ ಗೌಡರು ಜನರ ವಿಶ್ವಾಸದಿಂದಲೇ ನಾಯಕರಾಗಿ ರೂಪುಗೊಂಡವರು – ಅರವಿಂದ್ ಚೊಕ್ಕಾಡಿ




ಬ್ರಿಟಿಷರ ಆಡಳಿತದಲ್ಲಿ ತೊಂದರೆಯಿಂದ ಬೇಸತ್ತ ಕೃಷಿಕರು ರಾಜ ಪ್ರಭುತ್ವ ಪುನರ್ ಸ್ಥಾಪಿಸುವ ಉದ್ದೇಶದಿಂದ ಬಂಡಾಯ ಆರಂಭಿಸಿದರು. ಆ ವೇಳೆ ಜನರ ವಿಶ್ವಾಸಗಳಿಸಿದ್ದ ಕೆದಂಬಾಡಿ ರಾಮಯ್ಯ ಗೌಡರು ನಾಯಕರಾಗಿ ರೂಪುಗೊಂಡರು ಎಂದು ಅರವಿಂದ ಚೊಕ್ಕಾಡಿ ಹೇಳಿದರು. ಅವರು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಅಮ್ಮೆಮಡಿಯಾರು ಶಾಲೆಯಲ್ಲಿ ನಡೆದ ಸಮರ ವೀರ ಕೆದಂಬಾಡಿ ರಾಮಣ್ಣ ಗೌಡರ ಸ್ಮರಣೆ ಮಾಡುವ ಕಾರ್ಯಕ್ರಮ "ನೆಂಪುನ ಜಂಬರ" ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದರು. ಜನರ ದಂಗೆಯನ್ನು ವ್ಯವಸ್ಥಿತ ಬಂಡಾಯವನ್ನಾಗಿಸಲು ರಾಮಯ್ಯ ಗೌಡರು ಶ್ರಮಿಸಿದ್ದಾರೆ. ಅವರ ಹೋರಾಟವನ್ನು ಇಂದು ನಾವು ಜಾತಿಗೆ ಸೀಮಿತಗೊಳಿಸದೇ ಎಲ್ಲರೂ ಚಿಂತನೆ ಮಾಡುವಂತಾಗಬೇಕಿದೆ ಎಂದರು. ಮಂಗಳೂರಿನ ಬಾವುಟಗುಡ್ಡೆಯಲ್ಲಿ ರಾಮಯ್ಯ ಗೌಡರ ಪ್ರತಿಮೆ ನಿರ್ಮಾಣ ಸಮಿತಿಯ ಸಂಚಾಲಕರಾದ ಕಿರಣ್ ಬುಡ್ಲೆಗುತ್ತು ಮಾತನಾಡಿ "ಹೋರಾಟದಿಂದ ನನ್ನ ಇಡೀ ಕುಟುಂಬವನ್ನೇ ಕಳೆದುಕೊಂಡು ಹುತಾತ್ಮರಾದವರು ರಾಮಯ್ಯ ಗೌಡರು. ಅವರ ನೇತೃತ್ವದಲ್ಲಿ ನಡೆದ ಅಮರ ಸುಳ್ಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಲ್ಲಾ ಸಮುದಾಯ ಭಾಗಿಯಾಗಿದೆ. ಈ ಹೋರಾಟ ಇತಿಹಾಸದಲ್ಲಿ ದಾಖಲಾಗಿ ಮುಂದಿನ ಪೀಳಿಗೆಗೆ ನೆನಪಿಸುವ ಕೆಲಸ ಆಗಬೇಕು ಎಂದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸದಾನಂದ ಮಾವಜಿ ವಹಿಸಿದ್ದರು. ಹಿರಿಯರಾದ ಕೆದಂಬಾಡಿ ವೆಂಕಟ್ರಮಣ ಗೌಡ ಸಭಾಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಧ್ಯಕ್ಷೆ ಪೂರ್ಣಿಮಾ, ಅಕಾಡೆಮಿಯ ಗೌರವಾಧ್ಯಕ್ಷ ಲಕ್ಷ್ಮೀನಾರಾಯಣ ಕಜೆಗದ್ದೆ , ಗೌಡರ ಯುವ ಸೇವಾ ಸಂಘದ ಅಧ್ಯಕ್ಷ ಪಿ.ಎಸ್. ಗಂಗಾಧರ, ಜ್ಞಾನಧಾಮ ಚಾರಿಟೇಬಲ್ ಟ್ರಸ್ಟ್ ನ ಸಂಚಾಲಕರಾದ ದಾಮೋದರ ಗೌಡ ಮದುವೆಗದ್ದೆ, ಗ್ರಾಪಂ. ಉಪಾಧ್ಯಕ್ಷೆ ಚಿತ್ರಾ ಪಾಲಡ್ಕ, ಅಕಾಡೆಮಿಯ ಮಾಜಿ ಸದಸ್ಯ ಸುರೇಶ್ ಎಂ.ಎಚ್., ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ವಿದ್ಯಾಧರ ಹರ್ಲಡ್ಕ, ಮುಖ್ಯೋಪಾಧ್ಯಾಯಿನಿ ರಾಮಕ್ಕ , ಮಾಜಿ ಸೈನಿಕ ಅಡ್ಡಂತಡ್ಕ ದೇರಣ್ಣ ಗೌಡ, ನಿರ್ದೇಶಕರಾದ ಲತಾ ಕುದ್ಪಾಜೆ, ಡಾ.ಎನ್.ಎ. ಜ್ಞಾನೇಶ್ , ಲೋಕೇಶ್ ಊರುಬೈಲು ಮತ್ತಿತರು ಉಪಸ್ಥಿತರಿದ್ದರು. ಅಕಾಡೆಮಿ ಸದಸ್ಯರಾದ ಚಂದ್ರಾವತಿ ಬಡ್ಡಡ್ಕ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಚಂದ್ರಶೇಖರ ಪೇರಾಲು ಸ್ವಾಗತಿಸಿದರು. ಸವಿತಾ ಸಂದೇಶ್ ನಡುಮುಟ್ಲು ಪ್ರಾರ್ಥಿಸಿದರು. ನೆಹರು ಮೆಮೋರಿಯಲ್ ಕಾಲೇಜು ಉಪನ್ಯಾಸಕಿ ಬೇಬಿ ವಿದ್ಯಾ ಪಿ. ನಿರೂಪಿಸಿದರು.

# ಗೌಡರ ಯುವ ಸೇವಾ ಸಂಘದ ತಾಲೂಕು ಮಹಿಳಾ ಘಟಕದ ವತಿಯಿಂದ ತಾಲೂಕು ಮಟ್ಟದ ಚೆಸ್ ಸ್ಪರ್ಧೆ




ಸುಳ್ಯಗೌಡರ ಯುವ ಸೇವಾ ಸಂಘದ ತಾಲೂಕು ಮಹಿಳಾ ಘಟಕದ ವತಿಯಿಂದ ಸುಳ್ಯ ತಾಲೂಕು ಮಟ್ಟದ ಮಕ್ಕಳ ಚೆಸ್ ಸ್ಪರ್ಧೆ ಎ.22ರಂದು ಕೊಡಿಯಾಲಬೈಲಿನ ಗೌಡ ಸಮುದಾಯ ಭವನದಲ್ಲಿ ನಡೆಯಲಿದೆ ಎಂದುವತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ವಿನುತಾ ಪಾತಿಕಲ್ಲು ತಿಳಿಸಿದ್ದಾರೆ.

ಅವರು ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಸ್ಪರ್ಧೆಯ ವಿವರ ನೀಡಿದರು. ಅವರು 1ರಿಂದ 10ನೇ ತರಗತಿಯವರೆಗಿನ ಶಾಲಾ ಮಕ್ಕಳಿಗಾಗಿ ತಾಲೂಕು ಮಟ್ಟದ ಮುಕ್ತ ಚೆಸ್ ಸ್ಪರ್ಧೆಯನ್ನು ನಡೆಸಲಾಗುವುದು. ಜಾತಿಯ ನಿರ್ಬಂಧವಿಲ್ಲದೆ ನಡೆಯುವ ಈ ಪಂದ್ಯಾಟವು ಕಿರಿಯ ಪ್ರಾಥಮಿಕ (1–5) ಹಿರಿಯ ಪ್ರಾಥಮಿಕ (6–8) ಮತ್ತು ಪ್ರೌಢಶಾಲಾ ವಿಭಾಗ (9–10) ದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ವಿಭಾಗದಲ್ಲಿ ನಡೆಯಲಿರುವುದು. ಭಾಗವಹಿಸುವ ಸ್ಪರ್ಧಾಳುಗಳು ಚೆಸ್ ಬೋರ್ಡ್‌ನ್ನು ತಾವೇ ತರತಕ್ಕದ್ದು. ಸ್ಪರ್ಧೆಯ ಶುಲ್ಕವು ರೂ. 100/– ಆಗಿರುತ್ತದೆ. ಆಸಕ್ತ ವಿದ್ಯಾರ್ಥಿಗಳು ಎ.20ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ನ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ ಸ್ಪರ್ಧೆಯನ್ನು ಉದ್ಘಾಟಿಸಲಿದ್ದು, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ವಿನುತಾ ಪಾತಿಕಲ್ಲು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಗೌಡರ ಯುವ ಸೇವಾ ಸಂಘದ ಅಧ್ಯಕ್ಷ ಪಿ.ಎಸ್. ಗಂಗಾಧರ, ವೆಂಕಟ್ರಮಣ ಸೊಸೈಟಿಯ ಉಪಾಧ್ಯಕ್ಷ ದಿನೇಶ್ ಮಡಪ್ಪಾಡಿ, ಎಂಜಿಎಂ ಶಾಲೆಯ ಸಂಚಾಲಕರಾದ ದೊಡ್ಡಣ್ಣ ಬರೆಮೇಲು, ಗೌಡ ಮಹಿಳಾ ಘಟಕದ ಮಾಜಿ ಅಧ್ಯಕ್ಷರಾದ ರೇಣುಕಾ ಸದಾನಂದ ಜಾಕೆ, ಪುಷ್ಪಾ ರಾಧಾಕೃಷ್ಣ ಮಾಣಿಬೆಟ್ಟು, ತರುಣ ಘಟಕದ ಅಧ್ಯಕ್ಷ ಪ್ರೀತಂ ಕೇರ್ಪಳ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ (8496866368, 9480534929, 9481023779, 9900204956,) ಸಂಪರ್ಕಿಸಬಹುದು ಎಂದು ವಿನುತಾ ಪಾತಿಕಲ್ಲು ತಿಳಿಸಿದ್ದಾರೆ.

ಗೋಷ್ಠಿಯಲ್ಲಿ ತಾಲೂಕು ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸವಿತಾ ಸಂದೇಶ್, ಕೋಶಾಧಿಕಾರಿ, ಜಯಶ್ರೀ ರಾಮಚಂದ್ರ ಪಲ್ಲತ್ತಡ್ಕ, ಚೆಸ್ ಸ್ಪರ್ಧೆಯ ಸಂಚಾಲಕರಾದ ಭಾರತಿ ಉಳುವಾರು, ಮೀನಾಕ್ಷಿ ರಾಮಕಜೆ, ಪುಷ್ಪಾವತಿ, ಕುಸುಮಾ ಕೊಳಂಜಿಕೋಡಿ, ಜನಾರ್ದನ ಕೊಳೆಂಜಿಕೋಡಿ, ಸುಪ್ರೀತ್ ಮೋಂಟಡ್ಕ ಉಪಸ್ಥಿತರಿದ್ದರು.

# ಅರಂಬೂರು : ಗೌಡ ಗ್ರಾಮ ಉಪಸಮಿತಿಯ ಸಭೆ – ನೂತನ ಪದಾಧಿಕಾರಿಗಳ ಆಯ್ಕೆ






ಏ.04 ಶುಕ್ರವಾರದಂದು ಆಲೆಟ್ಟಿ ಗೌಡ ಗ್ರಾಮ ಸಮಿತಿಯ ಅಧ್ಯಕ್ಷರಾದ ಸತೀಶ್ ಕೊಯಿಂಗಾಜೆ ಯವರ ಅಧ್ಯಕ್ಷತೆಯಲ್ಲಿ ಶ್ರೀ ಮೂಕಾಂಬಿಕಾ ಭಜನಾ ಮಂದಿರ ಸಭಾಂಗಣದಲ್ಲಿ ಅರಂಬೂರು ಗೌಡರ ಉಪಸಮಿತಿಯ ಸಭೆ ನಡೆಯಿತು. ವೇದಿಕೆಯಲ್ಲಿ ಅರಂತೋಡು ವಲಯ ಉಸ್ತುವಾರಿ ತಾಲೂಕು ಸಮಿತಿಯ ಉಪಾಧ್ಯಕ್ಷರಾದ ಯತಿರಾಜ್ ಭೂತಕಲ್ಲು,ತಾಲೂಕು ಸಮಿತಿಯ ನಿರ್ದೇಶಕರಾದ ಜಗದೀಶ್ ಸರಳಿಕುಂಜ, ಹಿರಿಯರಾದ ನೆಡ್ಚಿಲ್ ಹುಕ್ರಪ್ಪ ಗೌಡ, ಸಲಹಾ ಸಮಿತಿಯ ಸದಸ್ಯರಾದ ಶ್ರೀಮತಿ ಹರಾವತಿ ಕುಡೆಕಲ್ಲು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಗೌಡ ಉಪಸಮಿತಿಯನ್ನು ರಚನೆ ಮಾಡಲಾಯಿತು. ಪುರುಷ ಸಮಿತಿಯ ಅಧ್ಯಕ್ಷರಾಗಿ ಮನೋಹರ ಅರಂಬೂರು, ಉಪಾಧ್ಯಕ್ಷರಾಗಿ ಕೃಷ್ಣಪ್ಪ ಕೆದಂಬಾಡಿ, ಪ್ರಧಾನ ಕಾರ್ಯದರ್ಶಿಯಾಗಿ ನೆಡ್ಚಿಲ್ ಗಂಗಾಧರ.ಎಸ್, ಜೊತೆ ಕಾರ್ಯದರ್ಶಿಯಾಗಿ ಗೋಪಾಲಕೃಷ್ಣ ಪಡ್ಪು ಹಾಗೂ ಸದಸ್ಯರುಗಳಾಗಿ ಸುಧಾಕರ್ ಬೆಳ್ಳಿಪ್ಪಾಡಿ, ಕೃಷ್ಣಪ್ರಸಾದ್ ಬದಿಕಾನ, ಉದಯ ಕುಮಾರ್ ಕುಮಾರಪ್ರಭಾ, ಧೀಕ್ಷಿತ್ ಪಾಲಡ್ಕ, ತೇಜಸ್ ಚಿದ್ಗಲ್, ಜಯಶಂಕರ್ ಪಡ್ಪು, ಶಿವಪ್ರಸಾದ್ ಪರಿವಾರ, ಗುರುಪ್ರಸಾದ್ ಕುಡೆಕಲ್ಲು ಹಾಗೂ ಗೌರವ ಸಲಹೆಗಾರರಾಗಿ ಎ.ಸಿ ವಸಂತ, ಚಂದ್ರಶೇಖರ ನೆಡ್ಚಿಲ್, ಪದ್ಮಯ್ಯ ಪಡ್ಪು ಇವರುಗಳನ್ನು ಆಯ್ಕೆ ಮಾಡಲಾಯಿತು. ಮಹಿಳಾ ಸಮಿತಿಯ ಅಧ್ಯಕ್ಷರಾಗಿ ಡಾ। ಅನುರಾಧ ಕುರುಂಜಿ, ಉಪಾಧ್ಯಕ್ಷರಾಗಿ ರಾಜೀವಿ ಅರಂಬೂರು, ಪ್ರಧಾನ ಕಾರ್ಯದರ್ಶಿಯಾಗಿ ವೇದಾವತಿ ನೆಡ್ಚಿಲ್, ಜೊತೆ ಕಾರ್ಯದರ್ಶಿಯಾಗಿ ಕವಿತಾ ಕುಡೆಕಲ್ಲು, ಸದಸ್ಯರುಗಳಾಗಿ ಚಂದ್ರಾವತಿ ಬದಿಕಾನ, ಕವಿತಾ ಕುಡೆಕಲ್ಲು, ಸವಿತಾ ಸರಳಿಕುಂಜ, ಗಾಯತ್ರಿ ನೆಡ್ಚಿಲ್, ಪುಷ್ಪಾವತಿ ಕುಡೆಕಲ್ಲು, ಸುಮನಾ ನೆಡ್ಚಿಲ್ ಹಾಗೂ ಗೌರವ ಸಲಹೆಗಾರರಾಗಿ ಹರಾವತಿ ಕುಡೆಕಲ್ಲು, ಉಷಾ ಚಂದ್ರಶೇಖರ ಸರಳಿಕುಂಜ ಇವರುಗಳನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಆಲೆಟ್ಟಿ ಗ್ರಾಮದ ಗೌಡ ಸಮಿತಿಯ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಮಂದಿ ಗೌಡ ಸ್ವಜಾತಿ ಬಂಧುಗಳು ಭಾಗವಹಿಸಿದ್ದರು ಆಲೆಟ್ಟಿ ಗ್ರಾಮ ಸಮಿತಿಯ ಕಾರ್ಯದರ್ಶಿ ಆಶೋಕ್ ಪೀಚೆ ಕಲ್ಲರ್ಪೆ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಕೆವಿಜಿ ಆಯುರ್ವೇದ ಮೆಡಿಕಲ್ ಕಾಲೇಜಿನ ಅಂತಿಮ ವರ್ಷದ ಸ್ನಾತಕೋತ್ತರ ವಿಭಾಗದ ಫಲಿತಾಂಶ ಪ್ರಕಟ – 100% ಫಲಿತಾಂಶ ದಾಖಲು




ಪ್ರತಿಷ್ಠಿತ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಕರ್ನಾಟಕ ಬೆಂಗಳೂರು ಮಾರ್ಚ್ 2025 ರಲ್ಲಿ ನಡೆಸಿದ ಅಂತಿಮ ವರ್ಷದ ಸ್ನಾತಕೋತರ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿದ್ದು ಕೆವಿಜಿ ಆಯುರ್ವೇದ ವೈದ್ಯಕೀಯ ಕಾಲೇಜಿನ 02 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 15 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ 01 ವಿದ್ಯಾರ್ಥಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಅಂತಿಮ ವರ್ಷದ ಸ್ನಾತಕೋತ್ತರ ವಿಭಾಗದಲ್ಲಿ 18 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಡಾ. ಧನ್ಯಶ್ರೀ ಯು. ಬಿ. ಹಾಗೂ ಡಾ. ಪ್ರಿಯ ಪಿ. ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳನ್ನು ಹಾಗೂ ಉಪನ್ಯಾಸಕರನ್ನು ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ (ರಿ.) ಸುಳ್ಯ ಇದರ ಅಧ್ಯಕ್ಷರಾದ ಡಾ. ಕೆ. ವಿ ಚಿದಾನಂದ, ಪ್ರಧಾನ ಕಾರ್ಯದರ್ಶಿಗಳಾದ ಆರ್ಕಿಟೆಕ್ಟ್ ಅಕ್ಷಯ್ ಕೆ. ಸಿ., ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಚಿದಾನಂದ ಕಾರ್ಯದರ್ಶಿಗಳಾದ ಡಾ ಐಶ್ವರ್ಯ ಕೆ ಸಿ., ಜೊತೆ ಕಾರ್ಯದರ್ಶಿಗಳಾದ ಶ್ರೀ. ಹೇಮನಾಥ್ ಕೆ. ವಿ., ಕೋಶಾಧಿಕಾರಿಗಳಾದ ಡಾ. ಗೌತಮ್ ಗೌಡ, ಕೌನ್ಸಿಲ್ ಮೆಂಬರ್ ಗಳಾದ ಶ್ರೀ. ಜಗದೀಶ್ ಅಡ್ತಲೆ, ಶ್ರೀಮತಿ. ಮೀನಾಕ್ಷಿ ಕೆ. ಹೆಚ್., ಶ್ರೀ. ಧನಂಜಯ ಮದುವೆಗದ್ದೆ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಲೀಲಾಧರ್ ಡಿ. ವಿ. ಯವರು ಅಭಿನಂದಿಸಿದ್ದಾರೆ

# ಕೊಲ್ಲಮೊಗ್ರು–ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ ಬಟ್ಟೋಡಿ ಅವರಿಗೆ ಬೀಳ್ಕೊಡುಗೆ



ಕೊಲ್ಲಮೊಗ್ರು–ಹರಿಹರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ ಬಟ್ಟೋಡಿ ಅವರಿಗೆ ಸೇವಾ ನಿವೃತ್ತಿಗೊಂಡ ಹಿನ್ನೆಲೆಯಲ್ಲಿ ಮಾ.31 ರಂದು ಸಂಘದ ಪ್ರಧಾನ ಕಛೇರಿಯಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಚಂದ್ರಶೇಖರ ಬಟ್ಟೋಡಿ ಅವರಿಗೆ ಶಾಲು ಹೊದಿಸಿ ಸ್ಮರಣಿಕೆ ಹಾಗೂ ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು. ಚಂದ್ರಶೇಖರ ಬಟ್ಟೋಡಿ ರವರ ಪತ್ನಿ ಶ್ರೀಮತಿ ಕಿರಣ, ಪುತ್ರ ಶಶಾಂಕ್.ಬಿ.ಸಿ ಹಾಗೂ ಪುತ್ರಿ ಶ್ರಾವ್ಯ.ಬಿ.ಸಿ ಜೊತೆಗಿದ್ದರು. ಈ ಸಂದರ್ಭದಲ್ಲಿ ಸಂಘದ ಆಡಳಿತಾಧಿಕಾರಿ ಮನೋಜ್ ಮಾಣಿಬೈಲು, ನಿಕಟಪೂರ್ವ ಅಧ್ಯಕ್ಷ ಹರ್ಷಕುಮಾರ್ ದೇವಜನ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಂತರಾಮ ಮಣಿಯಾನ, ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಷಪ್ಪ ಕಿರಿಭಾಗ, ಮಾಜಿ ಅಧ್ಯಕ್ಷರಾದ ವಿನೂಪ್ ಮಲ್ಲಾರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಸಿಬ್ಬಂದಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಬೆಳ್ಳಾರೆಯಲ್ಲಿ ಅಮರ ಸುಳ್ಯ ವಿಜಯ ಸ್ಮರಣೆ ದಿನ ಕಾರ್ಯಕ್ರಮ, ಬಂಗ್ಲೆಗುಡ್ಡೆ ಪ್ರವಾಸಿ ಕೇಂದ್ರವಾಗಿ ಮೂಡಿ ಬರಲಿ : ಭಾಗೀರಥಿ ಮುರುಳ್ಯ



ಅಮರ ಸುಳ್ಯ ಹೆರಿಟೇಜ್ ಫೌಂಡೇಷನ್,ಗ್ರಾಮ ಪಂಚಾಯತ್ ಬೆಳ್ಳಾರೆ,ಸ್ನೇಹಿತರ ಕಲಾ ಸಂಘ ಬೆಳ್ಳಾರೆ,ಅಕ್ಷಯ ಯುವಕ ಮಂಡಲ ನೆಟ್ಟಾರು ಸಂಯುಕ್ತ ಆಶ್ರಯದಲ್ಲಿ 1837 ರ ಅಮರ ಸುಳ್ಯ ಸ್ವಾತಂತ್ರ್ಯ ಹೋರಾಟದ 188 ನೇ ವರ್ಷದ ನೆನಪಿಗಾಗಿ ಅಮರ ಸುಳ್ಯ ವಿಜಯ ಸ್ಮರಣೆ ದಿನ ಕಾರ್ಯಕ್ರಮವು ಮಾ.30 ರಂದು ಬೆಳ್ಳಾರೆ ಕೆಪಿಎಸ್ ಸಭಾಂಗಣದಲ್ಲಿ ನಡೆಯಿತು. ಶಾಸಕಿ ಭಾಗೀರಥಿ ಮುರುಳ್ಯರವರು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಮಾತನಾಡಿ ಬೆಳ್ಳಾರೆಯ ಬಂಗ್ಲೆಗುಡ್ಡೆ ಐತಿಹಾಸಿಕ ಸ್ಥಳವಾಗಿದ್ದು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು. ಅಂದಿನ ಹೋರಾಟದ ಬಗ್ಗೆ ಜನರಿಗೆ ತಿಳಿಸುವಂತೆ ಆಗಬೇಕು. ಹೋರಾಟದಲ್ಲಿ ಮಡಿದವರನ್ನು ನೆನಪಿಸುವ ಕೆಲಸ ಆಗಬೇಕು ಎಂದು ಹೇಳಿದರು. ಅಭಿವೃದ್ಧಿಗೆ ಸರಕಾರದ ಅನುದಾನಕ್ಕೆ ಶ್ರಮ ವಹಿಸುವುದಾಗಿ ಅವರು ಹೇಳಿದರು. ಬಂಗ್ಲೆಗುಡ್ಡೆಗೆ ಹೋಗುವ ರಸ್ತೆಯನ್ನು ಕೂಡಲೇ ಅಭಿವೃದ್ಧಿ ಪಡಿಸುವುದಾಗಿ ಅವರು ಭರವಸೆ ನೀಡಿದರು. ಅಮರ ಸುಳ್ಯ ಹೆರಿಟೇಜ್ ಫೌಂಡೇಷನ್ ನ ಅಧ್ಯಕ್ಷ ಅನಿಂದಿತ್ ಕೊಚ್ಚಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸವಣೂರು ವಿದ್ಯಾರಶ್ಮಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸೀತಾರಾಮ ಕೇವಳರವರು ಮಾತನಾಡಿ ಅಂದು ಭೌಗೋಳಿಕವಾದಂತಹ ಹೋರಾಟ ಆಗಿದೆಯಾವುದೇ ಜಾತಿ,ಮತ,ಭೇದವಿಲ್ಲದೆ ಸಮಗ್ರ ಹೋರಾಟವಾಗಿತ್ತು ಎಂದು ಹೇಳಿದರು. ಬೆಳ್ಳಾರೆ ಐತಿಹಾಸಿಕ ಸ್ಥಳದ ಮಹತ್ವದ ಬಗ್ಗೆ ಮತ್ತು ಅಂದು ಬ್ರಿಟೀಷರ ವಿರುದ್ಧ ಹೋರಾಟದ ಬಗ್ಗೆ ಅವರು ಮಾಹಿತಿ ನೀಡಿದರು. ಕರ್ನಾಟಕ ಭಾಷಾ ಅಲ್ಪಸಂಖ್ಯಾತರ ಒಕ್ಕೂಟದ ರಾಜ್ಯಾಧ್ಯಕ್ಷ ಪ್ರತೀಕ್ ಪೊಣ್ಣಣ್ಣರವರು ಮಾತನಾಡಿ ಬೆಳ್ಳಾರೆಗೆ ವಿಶೇಷವಾದ ಮಹತ್ವ ಇದೆ.ಇಲ್ಲಿಸ್ವಾತಂತ್ರ್ಯ ಸಂಗ್ರಾಮದ ಮ್ಯೂಸಿಯಂ ಸ್ಥಾಪನೆಯಾಗಬೇಕು ಎಂದು ಹೇಳಿದರು. ಅಭಿವೃದ್ಧಿಯಾಗುವ ನಿಟ್ಟಿನಲ್ಲಿ ಸಹಕಾರ ನೀಡುವುದಾಗಿ ಹೇಳಿದರು. ಸಭಾ ಕಾರ್ಯಕ್ರಮದ ಮೊದಲು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ನಮಿತ ಎಲ್.ರೈಯವರು ಬಂಗ್ಲೆಗುಡ್ಡೆಯಲ್ಲಿ ಧ್ವಜಾರೋಹಣ ನೆರವೇರಿಸಿದರು.

ವೇದಿಕೆಯಲ್ಲಿ ಬೆಳ್ಳಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಆರ್.ಕೆ.ಭಟ್ ಕುರುಂಬುಡೇಲು,ನೆಟ್ಟಾರು ಅಕ್ಷಯ ಯುವಕ ಮಂಡಲದ ಅಧ್ಯಕ್ಷ ಭಾಸ್ಕರ ನೆಟ್ಟಾರು,ಬೆಳ್ಳಾರೆ ಕೆಪಿಎಸ್ ಕಾರ್ಯಾಧ್ಯಕ್ಷ ಶ್ರೀನಾಥ ರೈ ಬಾಳಿಲ,ಸ್ನೇಹಿತರ ಕಲಾ ಸಂಘದ ಪೂರ್ವಾಧ್ಯಕ್ಷ ವಸಂತ ಉಲ್ಲಾಸ್ ಉಪಸ್ಥಿತರಿದ್ದರು. ಇಂಚನ ಪಿ.ಡಿ.ಪ್ರಾರ್ಥಿಸಿ,ಗ್ರಾ.ಪಂ.ಸದಸ್ಯ. ಚಂದ್ರಶೇಖರ ಪನ್ನೆ ಸ್ವಾಗತಿಸಿದರು.ದಿಲೀಪ್ ಗಟ್ಟಿಗಾರು ಕಾರ್ಯಕ್ರಮ ನಿರೂಪಿಸಿ,ಶೈಲೇಶ್ ನೆಟ್ಟಾರು ವಂದಿಸಿದರು.

# ಏ.11 ರಿಂದ 15: ಶ್ರೀ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದಿಂದ ಸಂಸ್ಕಾರ ವಾಹಿನಿ ಶಿಬಿರ




ಸುಳ್ಯ: ಹಳೆಗೇಟು ವಿದ್ಯಾನಗರದ ಶ್ರೀ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ವತಿಯಿಂದ 'ಸಂಸ್ಕಾರ ವಾಹಿನಿ' ಮಕ್ಕಳ ಬೇಸಿಗೆ ಶಿಬಿರ ಎ.11ರಿಂದ 15ರ ತನಕ ನಡೆಯಲಿದೆ ಎಂದು ಶ್ರೀ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ಸಂಚಾಲಕಿ ಶ್ರೀದೇವಿ ನಾಗರಾಜ್ ಭಟ್ ತಿಳಿಸಿದ್ದಾರೆ. ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ಎರಡು ದಶಕಗಳಿಂದ ಸಾವಿರಾರು ಕನಸುಗಳನ್ನು ಹೊತ್ತು ಸಾಗುತ್ತಿರುವ ಸಮಾಜಮುಖೀ ಸಂಸ್ಥೆ 'ಶ್ರೀ ಚೆನ್ನಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನ'. ಧಾರ್ಮಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡ, ಪೂರ್ಣ ಅಧ್ಯಯನ ಮಾಡಿದ ವೈದಿಕರು ಸದಾ ರಾಷ್ಟ್ರಪ್ರಜ್ಞೆಯನ್ನು ಹೃದಯಕ್ಕೆ ಆವಾಹಿಸಿಕೊಂಡು ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವ ಸಜ್ಜನ ಬಳಗ ಪ್ರತಿಷ್ಠಾನದ ಸಂಪನ್ಮೂಲ. ಧರ್ಮ ಸಂಸ್ಕೃತಿ, ಕಲೆ ಅನಾದಿ ಕಾಲದಿಂದಲೂ ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದಿದೆ. ಮನುಷ್ಯನ ಬದುಕಿನಲ್ಲಿ ಸಚ್ಚಾರಿತ್ರ್ಯ ನಿರ್ಮಾಣಕ್ಕೆ ಇದೆಲ್ಲವೂ ಅತೀ ಅಗತ್ಯ ಧರ್ಮ ಸಂಸ್ಕೃತಿಗಳು ಬದುಕಿಗೆ ಒಳ್ಳೆಯ ಸಂಸ್ಕಾರ ನೀಡಿದರೆ, ಕಲೆ ಮನಸ್ಸಿಗೆ ಮುದ ನೀಡುತ್ತಾ ಸಾಮಾಜಿಕ ಬದುಕಿಗೆ ತನ್ನನ್ನು ಅಣಿಗೊಳಿಸುತ್ತದೆ.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಚಾರಿತ್ರ್ಯಪೂರ್ಣ ಬದುಕನ್ನು ಕಲಿಸುವ ಸಂಕಲ್ಪದೊಂದಿಗೆ ಶ್ರೀ ಕೇಶವಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ಆಶ್ರಯದಲ್ಲಿ ಎಲ್ಲಾ ವರ್ಗದವರಿಗೂ ಸಂಸ್ಕೃತದ ಶ್ಲೋಕಗಳು, ವೇದೋಪನಿಷತ್ತು ಮಂತ್ರಗಳು, ಪುರಾಣದ ಸಾರಗಳನ್ನು ಭಗವದ್ಗೀತೆ, ಸಂಸ್ಕೃತ ಭಾಷಾ ಕಲಿಕೆ, ಭೋಜನ ಮಂತ್ರಗಳು, ಯೋಗಾಭ್ಯಾಸ ಹೀಗೆ ಹಲವಾರು ಸಂಸ್ಕಾರಗಳನ್ನು ಕಲಿಸುವ ಸದುದ್ದೇಶದಿಂದ ಪ್ರತಿ ವರ್ಷ ಸಂಸ್ಕಾರವಾಹಿನಿ ಶಿಬಿರ ಆಯೋಜಿಸಲಾಗುತ್ತದೆ.

ಈ ಶಿಬಿರವು ಪುರೋಹಿತ ನಾಗರಾಜ ಭಟ್ ಸಂಚಾಲಕತ್ವದಲ್ಲಿ ನಡೆಯಲಿದೆ. ಒಂದು ವಾರದ ಕಾಲ ನಡೆಯಲಿರುವ ಈ ಶಿಬಿರಕ್ಕೆ ಈ ವರ್ಷವೂ 100 ಮಂದಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಉಚಿತ ಭೋಜನ, ಉಪಹಾರ, ಪಾಠ, ಪಠ್ಯ ಪುಸ್ತಕಗಳು ನೀಡಲಾಗುತ್ತಿದೆ. ಹಲವಾರು ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಗಳು, ವೇದ ವಿದ್ವಾಂಸರು ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದು, ವಿಷು ವಿಶೇಷ ಆಚರಣೆಯನ್ನು ಶಿಬಿರಾರ್ಥಿಗಳ ಜೊತೆಗೂಡಿ ಆಚರಿಸಲಿದ್ದಾರೆ.

ಎ.11ರಂದು ಪೂ10.30ಕ್ಕೆ ಶಿಬಿರವನ್ನು, ಸುಳ್ಯದ ದಂತವೈದ್ಯರಾದ ಡಾ. ವಿದ್ಯಾಶಾರದಾ ಉದ್ಘಾಟಿಸಲಿದ್ದಾರೆ ಸಂಸ್ಕಾರವಾಹಿನಿ ಶಿಬಿರದ ಸಂಚಾಲಕಿ ಪಾರ್ವತಿ ಮುಳ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ಸಂಚಾಲಕಿ ಶ್ರೀದೇವಿ ನಾಗರಾಜ್ ಶುಭಾಶಂಸನೆಯನ್ನು ಮಾಡಲಿದ್ದು, ದಿಕ್ಸೂಚಿ ಉಪನ್ಯಾಸವನ್ನು ನಿವೃತ್ತ ಕನ್ನಡ ಉಪನ್ಯಾಸಕಿ ಕುಸುಮಾ ಯು.ಬಿ. ನೆರವೇರಿಸಲಿದ್ದಾರೆ. ಎ.15ರಂದು ಸಂಜೆ 4 ಗಂಟೆಗೆ ಶಿಬಿರದ ಸಮಾಪನಾ ಸಮಾರಂಭವು ನಡೆಯಲಿದೆ. ವ್ಯಕ್ತಿತ್ವ ವಿಕಸನ ತರಬೇತುದಾರರಾದ ಉಪನ್ಯಾಸಕಿ ಡಾ.ಅನುರಾಧ ಕುರುಂಜಿ ಮುಖ್ಯ ಭಾಷಣ ಮಾಡಲಿದ್ದಾರೆ. ಸಭಾಧ್ಯಕ್ಷತೆಯನ್ನು ಪ್ರಭಾ ಸುರೇಶ್ ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಶಿಬಿರದ ಸಂಚಾಲಕಿ ಪಾರ್ವತಿ ಮುಳ್ಯ ನಮಿತಾ ರಾವ್, ಪ್ರಭಾ ಸುರೇಶ್, ಸುಮಾ ಶಾಂತಿನಗರ ಉಪಸ್ಥಿತರಿದ್ದರು.

## ಅಂಚೆ ಇಲಾಖೆಯಿಂದ ಪತ್ರ ಲೇಖನ ಸ್ಪರ್ಧೆಯಲ್ಲಿ ಸುಳ್ಯಕ್ಕೆ ಬಹುಮಾನ – ರಾಜ್ಯ ಮಟ್ಟದಲ್ಲಿ ತೃತೀಯ ಬಹುಮಾನ ಪಡೆದ ಕಾವ್ಯಶ್ರೀ ಬಿ. ಶೇಣಿ



ಭಾರತೀಯ ಅಂಚೆ ಇಲಾಖೆ ವತಿಯಿಂದ ನಡೆದ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪತ್ರ ಲೇಖನ ಸ್ಪರ್ಧೆ ಢಾಯಿ ಆಖರ್ – 2024 ಇದರಲ್ಲಿ ಸುಳ್ಯ ಅಂಚೆ ಉಪ ವಿಭಾಗ ವ್ಯಾಪ್ತಿಯ ಅಮರಮುಡ್ನೂರು ಗ್ರಾಮದ ಶೇಣಿಯ ಕಾವ್ಯಶ್ರೀ ಬಿ ರಾಜ್ಯ ಮಟ್ಟದಲ್ಲಿ ತೃತೀಯ ಬಹುಮಾನ ಪಡೆದಿದ್ದಾರೆ.ಕಾವ್ಯಶ್ರೀಯವ–ರಿಗೆ ಎ. 2 ರಂದು ಅವರ ಶೇಣಿ ಮನೆಯಲ್ಲಿ ಸುಳ್ಯಉಪ ವಿಭಾಗದ ಅಂಚೆ ನಿರೀಕ್ಷಕರಾದ ವಿನೋದ್ ಕುಮಾರ್ ರವರು ಬಹುಮಾನದ ಚೆಕ್ ವಿತ–ರಿಸಿದರು. ಸುಳ್ಯ ಅಂಚೆ ಮೇಲ್ವಿಚಾರಕರಾದ ಬಾಬು. ಎಸ್, ರಮೇಶ್, ತೊಡಿಕಾನ ಅಂಚೆಪಾಲಕ ದೇವಪ್ಪ ಹೈದಂಗೂರು, ಚೊಕ್ಕಾಡಿ ತಾತ್ಕಾಲಿಕ ಅಂಚೆ ವಿತರಕಿ ಹೇಮಲತಾ, ಕಾವ್ಯಶ್ರೀಯವರ ಪತಿ ಕಡಬದಲ್ಲಿ ಆದರ್ಶ ವಿವಿದೋದ್ದೇಶ ಸಹಕಾರ ಸಂಘದ ಉದ್ಯೋಗಿ ಅಶ್ವಿನ್ ರೈ ಹಾಗೂ ಮನೆಯವರು ಉಪಸ್ಥಿತರಿದ್ದರು. ಕಾವ್ಯಶ್ರೀ ಯವರು ಕಡಬದಲ್ಲಿ ರಾಮಕೃಷ್ಣ ಸಹಕಾರಿ ಸಂಘದ ಉದ್ಯೋಗಿ.

## ಬಾಳಿಲ ವಿದ್ಯಾಬೋಧಿನೀ ವಿದ್ಯಾಸಂಸ್ಥೆಗಳ ನೂತನ ಮುಖ್ಯೋಪಾಧ್ಯಾಯರಾಗಿ ಉದಯಕುಮಾರ್ ರೈ ಎಸ್



ಬಾಳಿಲ ವಿದ್ಯಾಬೋಧಿನೀ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿದ್ದ ಯಶೋಧರ ಎನ್ ಇವರು ಮಾರ್ಚ್ 31ರಂದು ವಯೋ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ 1 ಏಪ್ರಿಲ್ 2025 ರಿಂದ ಪ್ರೌಢಶಾಲೆಯ ನೂತನ ಮುಖ್ಯಶಿಕ್ಷಕರಾಗಿ ಗಣಿತ–ವಿಜ್ಞಾನ ಸಹಶಿಕ್ಷಕರಾದ ಉದಯಕುಮಾರ್ ರೈ ಎಸ್ ಅಧಿಕಾರ ವಹಿಸಿಕೊಂಡಿದ್ದಾರೆ. 30.03.1998ರಲ್ಲಿ ಶಿಕ್ಷಕರಾಗಿ ಸೇರ್ಪಡೆಗೊಂಡು, 28.07.1998 ರಂದು ಇಲಾಖಾ ಅನುಮೋದನೆಯೊಂದಿಗೆ ಖಾಯಂ ಸಹಶಿಕ್ಷಕರಾಗಿ 27 ವರ್ಷಗಳ ಸೇವಾ ಅನುಭವ ಹೊಂದಿರುವ ಇವರು 2023ರ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರು. 1.6.2024 ರಿಂದ ವಿದ್ಯಾಬೋಧಿನೀ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಕಳೆದ 12 ವರ್ಷಗಳಿಂದ ಭಾರತ್ ಸ್ಕೌಟ್ ಮತ್ತು ಗೈಡ್ ಸ್ಥಳೀಯ ಸಂಸ್ಥೆ ಪಂಜ ಇದರ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಪತ್ನಿ ದಿವ್ಯ ಆಳ್ವರವರು ಕುಂಬ್ರ ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ರಸಾಯನಶಾಸ್ತ್ರ ಉಪನ್ಯಾಸಕಿ.

## ಡಾ. ಹರಿಕೃಷ್ಣ ರೈಯವರಿಗೆ ಅಮೆರಿಕಾದಲ್ಲಿ ನಡೆದ "ಜಿ. ಇ ಹೆಲ್ತ್ ಕೇರ್ ವಿಶ್ವ ಸಂಶೋಧನಾ ಸ್ಪರ್ಧೆ"ಯಲ್ಲಿ ಪೀಪಲ್ ಚಾಯ್ಸ್ ಅವಾರ್ಡ್ 2025




ಸುಳ್ಯದ ಡಾ. ಹರಿಕೃಷ್ಣ ರೈ ಯವರು ಬೆಂಗಳೂರಿನ ಜಿ.ಇ ಹೆಲ್ತ್ ಕೇರ್ ಸಂಸ್ಥೆಯಲ್ಲಿ ಸೀನಿಯರ್ ಪ್ರಾಡಕ್ಟ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದು, ನಿನ್ನೆ ಎ.4 ರಂದು ಅಮೇರಿಕಾದ ವಿಸ್ಕಾನ್ಸಿನ್ ರಾಜ್ಯದ ಮಿಲ್ವಾಕೀ ನಗರದಲ್ಲಿ ನಡೆದ ಜಿ ಇ ಹೆಲ್ತ್ ಕೇರ್ ವಿಶ್ವ ಸಂಶೋಧನಾ ಸ್ಪರ್ಧೆ 2025 ರಲ್ಲಿ ಭಾಗವಹಿಸಿ, ಅವರು ಪ್ರದರ್ಶಿಸಿದ " ಎಂ.ಆರ್.ಐ ಸ್ಕ್ಯಾನರ್ ನಲ್ಲಿ ಕ್ಯಾಮರಾ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮೂಲಕ ರೋಗಿಗಳ ಉಸಿರಾಟದ ಹಾಗೂ ಹೃದಯದ ಇ.ಸಿ.ಜಿ ತರಂಗರೂಪ ಪಡೆಯುವ" ತಂತ್ರಜ್ಞಾನ" ಕ್ಕೆ ಜಿ.ಇ ಸಂಸ್ಥೆ ನೀಡುವ ಪೀಪಲ್ ಚಾಯ್ಸ್ ಅವಾರ್ಡ್ ನ್ನು ಜಿ. ಇ ಹೆಲ್ತ್ ಕೇರ್ ಸಂಸ್ಥೆಯ ವಿಶ್ವ ಸಂಶೋಧನಾ ವಿಭಾಗದ ಜನರಲ್ ಮ್ಯಾನೇಜರ್ ಡಾ. ಜೇಸನ್ ಪೋಲ್ಸನ್ ಅವರು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಜಿ ಇ ಸಂಸ್ಥೆಯ ಸಿ.ಟಿ.ಓ ಜ್ಯೂಲಿ, ವೈಸ್ ಪ್ರೆಸಿಡೆಂಟ್ ಅನುಜ್ ಕರುಣ್, ಚೀಫ್ ಆರ್ಕಿಟೆಕ್ಟ್ ಆಂಡ್ರೂ ಬೈಶಾಂಕ್ ಅವರು ವೇದಿಕೆಯಲ್ಲಿದ್ದು ಡಾ.ಹರಿಕೃಷ್ಣ ರೈ ಯವರ ಈ ಹೊಸ ತಂತ್ರಜ್ಞಾನ ಅನ್ವೇಷಣೆಯನ್ನು ಶ್ಲಾಘಿಸಿ ಸಂಸ್ಥೆಯು ಈ ತಂತ್ರಜ್ಞಾನವನ್ನು ಮುಂದಿನ ದಿನಗಳಲ್ಲಿ ಜಿ. ಇ ಸಂಸ್ಥೆಯು ಹೊರತರಲಿರುವ ಎಂ.ಆರ್.ಐ ಸ್ಕ್ಯಾನರುಗಳಲ್ಲಿ ಅಳವಡಿಸಿ ರೋಗಿಗಳ ಹೃದಯ ಹಾಗೂ ಶ್ವಾಸಕೋಶ ಸಂಬಂಧಿತ ಸ್ಕ್ಯಾನ್ ಗಳನ್ನು ಶೀಘ್ರಗೊಳಿಸಲು ಬಳಸಿಕೊಳ್ಳಲಿದೆಯೆಂದು ಈ ಸಂಶೋಧನಾ ಅಧಿವೇಶನದಲ್ಲಿ ಘೋಷಿಸಿದರು.ಈ ಸಂಶೋಧನಾ ಸ್ಪರ್ಧೆಯಲ್ಲಿ ಜಿ.ಇ ಸಂಸ್ಥೆಯ ಭಾರತ, ಚೀನಾ, ಇಸ್ರೇಲ್, ಯೂರೋಪ್ ಹಾಗೂ ಅಮೇ–ರಿಕಾ ದೇಶಗಳ ಸಂಶೋಧನಾ ಪ್ರತಿನಿಧಿಗಳು ಭಾಗವಹಿಸಿದ್ದರು. ಡಾ. ಹರಿಕೃಷ್ಣ ರೈ ಯವರು ಸುಳ್ಯ ಗಾಂಧಿನಗರದ ನಿವೃತ್ತ ವಲಯಾರಣ್ಯಾಧಿಕಾರಿಗಳಾದ ನಾರಾಯಣ ರೈ ಯವರ ಪುತ್ರರಾಗಿದ್ದು ಪ್ರಸ್ತುತ ಬೆಂಗಳೂ–ರಿನಲ್ಲಿ ಜಿ.ಇ ಹೆಲ್ತ್ ಕೇರ್ ಸಂಸ್ಥೆಯಲ್ಲಿಸೇವೆ ಸಲ್ಲಿಸುತ್ತಿದ್ದಾರೆ.

## ಸುಳ್ಯ ; ಪ್ರಥಮ ದರ್ಜೆ ಕಾಲೇಜಿನಲ್ಲಿ ಉಚಿತ ಸ್ಪೋಕನ್ ಹಿಂದಿ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭ




ಸುಳ್ಯದ ಸರಕಾರಿ ಪ್ರಥ–ಮ ದರ್ಜೆ ಕಾಲೇಜಿನ ಹಿಂದಿ ವಿಭಾಗದ ವತಿಯಿಂದ ಉಚಿತ ಸ್ಪೋಕನ್ ಹಿಂದಿ ಸರ್ಟಿಫಿಕೇಟ್ ಕೋರ್ಸ್ ಎ.08 ರಂದು ಪ್ರಾರಂಭಗೊಂಡಿತು. ಇದರ ಉದ್ಘಾಟಕರಾಗಿ ಮೂಡಬಿದಿರೆಯ ಆಳ್ವಾಸ್ ಕಾಲೇಜಿನ(ಸ್ವಾಯತ್ತ) ಹಿಂದಿ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ದೇವಕಿ ಪ್ರಸನ್ನ ಜಿ. ಎಸ್ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸತೀಶ್ ಕುಮಾರ್ ಕೆ ಆರ್ ಇವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರಾದ ಶ್ರೀ. ರಾಮಕೃಷ್ಣ ಕೆ. ಎಸ್ ರವರು ಹಿಂದಿ ಕಲಿತರೆ ನಮ್ಮಲ್ಲಿ ಆತ್ಮವಿಶ್ವಾಸ ಬೆಳೆಯುವುದರ ಜೊತೆಗೆ ಭಾರತದಾದ್ಯಂತ ನೌಕರಿ ಪಡೆಯಲು ಸಹಕಾರಿಯಾಗಲಿದೆ ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ. ದೇವಕಿ ಪ್ರಸನ್ನ ರವರು, ಹಿಂದಿ ಭಾಷೆ ವಿಪುಲ ಉದ್ಯೋಗ ಅವಕಾಶಗಳನ್ನು ಒದಗಿಸುವುದಲ್ಲದೇ ಇಂದಿನ ಜನಾಂಗಕ್ಕೆ ಬಹಳ ಅಗತ್ಯವಾಗಿ ಬೇಕಾದ ಭಾಷೆಯಾಗಿದೆ, ಇದನ್ನು ಕಲಿಯುವುದು ಬಹಳ ಸುಲಭ ಎಂದು ಹೇಳಿದರು. ಆಂತರಿಕ ಗುಣಮಟ್ಟ ಭರವಸಾ ಕೋಶದ ಸಂಚಾಲಕರಾದ ಡಾ. ಪ್ರೀತಿ ಕೆ ರಾವ್ ಹಾಗೂ ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಪ್ರೊ. ಉದಯಶಂಕರ್ ಹೆಚ್. ಕಾರ್ಯಕ್ರಮಕ್ಕೆ ಶುಭ ಕೋ–ರಿದರು. ಹಿಂದಿ ಸಂಘದ ಅಧ್ಯಕ್ಷೆ ಕುಮಾರಿ ಪಂಚಮಿ ಕೆ ಸ್ವಾಗತಿಸಿದರು, ಹಿಂದಿ ವಿಭಾಗದ ಉಪನ್ಯಾಸಕಿ ಶ್ರೀಮತಿ ಸ್ವಾತಿ ಎಮ್ ವಂದಿಸಿದರು. ದ್ವಿತೀಯ ಬಿ. ಕಾಮ್ ನ ದೀಪ ಕೆ ಎಮ್ ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಈ ಕೋರ್ಸ್ ನಲ್ಲಿ ಒಟ್ಟು 60 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು ಬಹುತೇಕ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಹೊಸ ಚಿಗುರೆಲೆ

ಜಗತ್ತು ಎಲ್ಲವನ್ನೂ ಮರೆಸುತ್ತದೆ
ಮತ್ತೆ ಹಳೆಯದನ್ನು ನೆನೆಪಿಸುತ್ತದೆ.
ಕಣ್ಣೀರು ಸುರಿಸಿದ ಕಣ್ಣುಗಳು
ಕ್ಷಣದಲ್ಲೇ ಮತ್ತೊಂದು ಬೆರಗಿನ ಬಣ್ಣ ನಕ್ಕು ಬಿಡುತ್ತದೆ
ಹೊಸತೆಲ್ಲವೂ ಹಳತು
ಮತ್ತೊಂದು ಬೀಜ ಮೊಳೆತು
ಸಾಕ್ಷಿಯಾಗುತ್ತದೆ ಹೂಗಳು
ಬಲಿತ ಕಾಯಿ
ಅಲ್ಲೇ ಉದುರಿದ ಹಣ್ಣೆಲೆ
ಮತ್ತೆ ಮರದಲ್ಲಿ ಚಿಗುರೆಲೆ
ಹೌದು
ಜಗತ್ತು ಎಲ್ಲಾ ಎಲ್ಲವನ್ನು ಮರೆಸುತ್ತದೆ
ಕಾಲದ ಅಡಿಯಲ್ಲಿ ಎಲ್ಲವನ್ನು
ಮರೆಸುತ್ತದೆ ಹೊಸ ಜೀವನದೊಂದಿಗೆ



–ಶ್ರೀಮತಿ ಶಶಿಕಲಾ ಶುಭಕರ
ಕುಂಭಕೋಡು ಕಸ್ತೂರಿ ಅಚ್ಚುತ ಭಟ್
ಕಲಾಮಂದಿರ
ಒಡಬಾಯಿ ಸುಳ್ಯ

## ವಿದ್ಯಾಬೋಧಿನೀ ವಿದ್ಯಾಸಂಸ್ಥೆಗಳು ಬಾಳಿಲ: 'ರಂಗ ತರಂಗ' ಬೇಸಿಗೆ ಶಿಬಿರ




ವಿದ್ಯಾಬೋಧಿನೀ ವಿದ್ಯಾಸಂಸ್ಥೆಗಳು ಬಾಳಿಲದಲ್ಲಿ ಏಳು ದಿನಗಳ ಬೇಸಿಗೆ ಶಿಬಿರ 'ರಂಗ ತರಂಗ' ಎ. 01ರಂದು ಉದ್ಘಾಟನೆಗೊಂಡಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಿದ್ಯಾಬೋಧಿನೀ ಎಜುಕೇಶನಲ್ ಸೊಸೈಟಿ (ರಿ) ಬಾಳಿಲ ಇದರ ಅಧ್ಯಕ್ಷರಾಗಿರುವ ಶ್ರೀ ರಾಧಾಕೃಷ್ಣ ರಾವ್ ಯು ವಹಿಸಿದ್ದರು. "ಇನ್ನಷ್ಟು ಹೊಸತನ ಬರಲಿ. ರಂಗ ತರಂಗ ಅಲೆ ಅಲೆಯಾಗಿ ಸಾಗಲಿ ." ಎಂದು ಶುಭಹಾರೈಸಿದರು. ಪಿ. ಜಿ. ಎಸ್. ಎನ್. ಪ್ರಸಾದ್, ಸಂಚಾಲಕರು , ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ, ಕಾರ್ಯಕ್ರಮಕ್ಕೆ ಶುಭಕೋ–ರಿದರು. ವೇದಿಕೆಯಲ್ಲಿ ಕೈಂತಜೆ ರಾಮಭಟ್ ಕೋಶಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಸಚಿನ್ ಶರ್ಮಾ ಗಾಯಕರು ಮತ್ತು ಉದಯ ಭಾಸ್ಕರ್, ಸಂಗೀತ ನಿರ್ದೇಶಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾಬೋಧಿನೀ ವಿದ್ಯಾಸಂಸ್ಥೆಗಳು ಬಾಳಿಲ ಇದರ ನೂತನ ಮುಖ್ಯೋಪಾಧ್ಯಾಯರಾದ ಉದಯಕುಮಾರ್ ರೈ ಎಸ್, ಸ್ವಾಗತಿಸಿದ ಕಾರ್ಯಕ್ರಮವನ್ನು ಸಹಶಿಕ್ಷಕಿ ಶುಭಾ.ಡಿ ವಂದಿಸಿದರು. ಸಹಶಿಕ್ಷಕಿ ಸಹನಾ ಬಿ ಬಿ ನಿರೂಪಿಸಿದರು.

ಏಳು ದಿನಗಳಲ್ಲಿ ವಿವಿಧ ಸಂಪನ್ಮೂಲ ವ್ಯಕ್ತಿಗಳ ಮೂಲಕ ಭಾಷಣ ಕಲೆ, ನಿರೂಪಣೆ, ಸಾಹಿತ್ಯ, ಮುಖವರ್ಣಿಕೆ, ಮುಖವಾಡ ತಯಾರಿ, ರಂಗತರಬೇತಿ, ಕ್ರಾಫ್ಟ್, ವ್ಯಕ್ತಿ ವಿಕಸನ, ನಾಯಕತ್ವ ,ಮಕ್ಕಳ ಜಾತ್ರೆ, ಹೊರ ಸಂಚಾರ ಮುಂತಾದ ವಿವಿಧ ವಿಷಯಗಳ ಬಗ್ಗೆ ತರಬೇತಿ ನೀಡಲಾಗುವುದು ಎಂದು ಶಾಲಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಬಾಳಿಲ ವಿದ್ಯಾಬೋಧಿನೀ ಅನುದಾನಿತ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಯಶೋಧರ ನಾರಾಲು ನಿವೃತ್ತಿ



ವಿದ್ಯಾಬೋಧಿನೀ ಅನುದಾನಿತ ಪ್ರೌಢಶಾಲೆ ಬಾಳಿಲದ ಮುಖ್ಯ ಶಿಕ್ಷರಾದ ಯಶೋಧರ ನಾರಾಲು ಮಾ. 31ರಂದು ನಿವೃತ್ತರಾಗಿದ್ದಾರೆ. ಅಜ್ಜಾವರ ಗ್ರಾಮದ ನಾರಾಲು ಮನೆತನದ ನಿವೃತ್ತ ಶಿಕ್ಷಕ ದಿವಂಗತ ವೀರಪ್ಪ ಗೌಡ ನಾರಾಲು ಮತ್ತು ದಿ|ರಾಮಕ್ಕ ದಂಪತಿಗಳ ಪುತ್ರರಾಗಿರುವ ಯಶೋಧರ ನಾರಾಲುರವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅಜ್ಜಾವರ, ಪ್ರೌಢ ಶಿಕ್ಷಣವನ್ನು ಸರಕಾರಿ ಪ್ರೌಢಶಾಲೆ ಅಜ್ಜಾವರದಲ್ಲಿ ಪೂರೈಸಿದರು.

ಸರಕಾರಿ ಪದವಿಪೂರ್ವ ಕಾಲೇಜ್ ಸುಳ್ಯ ಇಲ್ಲಿ ಪಿಯುಸಿ ಮತ್ತು ನೆಹರು ಮೆಮೋರಿಯಲ್ ಕಾಲೇಜ್ ಸುಳ್ಯದಲ್ಲಿ ಬಿಎ ಪದವಿಯನ್ನು ಪಡೆದು, ಮೈಸೂರು ವಿಶ್ವ ವಿದ್ಯಾನಿಲಯದಿಂದ ಕನ್ನಡ ಐಚ್ಛಿಕ ವಿಷಯದಲ್ಲಿ ಎಂ.ಎ ಪದವಿಯನ್ನು ಪಡೆದು ಬಳಿಕ ಸರ್ವೋದಯ ಶಿಕ್ಷಕ ಶಿಕ್ಷಣ ಕಾಲೇಜು ವಿರಾಜಪೇಟೆಯಲ್ಲಿ ಬಿ.ಎಡ್ ಪದವಿಯನ್ನು ಪಡೆದರು. ಸರಕಾರಿ ಪ್ರೌಢಶಾಲೆ ಅಜ್ಜಾವರದಲ್ಲಿ 2 ವರ್ಷ ಗೌರವ ಶಿಕ್ಷಕರಾಗಿ, ಸುಳ್ಯದ ಕೆವಿಜಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ 5 ವರ್ಷ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದರು. 1997 ಅ. 17ರಿಂದ ಬಾಳಿಲ ವಿದ್ಯಾಬೋಧಿನೀ ಪ್ರೌಢಶಾಲೆಯಲ್ಲಿ ಖಾಯಂ ನೆಲೆಯಲ್ಲಿ ಸಹ ಶಿಕ್ಷಕರಾಗಿ ಸೇರ್ಪಡೆಗೊಂಡು 23 ವರ್ಷಗಳ ಕಾಲ ಸಹ ಶಿಕ್ಷಕರಾಗಿ ಬಳಿಕ 2020ರಂದು ಮುಖ್ಯ ಶಿಕ್ಷಕರಾಗಿ ಭಡ್ತಿಗೊಂಡು ನಾಲ್ಕುವರೆ ವರ್ಷಗಳ ಕಾಲ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿ, ಒಟ್ಟು 35 ವರ್ಷಗಳ ಶಿಕ್ಷಕ ವೃತ್ತಿಯಿಂದ ಮಾ. 31ರಂದು ವಯೋನಿವೃತ್ತಿ ಹೊಂದಲಿದ್ದಾರೆ.

## ಹರಿಹರ ಪಳ್ಳತಡ್ಕದಲ್ಲಿ ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನೆ



ಸುಬ್ರಹ್ಮಣ್ಯ ಎ.06 : ಕೌಸ್ತುಭ ಕಲಾ ಟ್ರಸ್ಟ್ (ರಿ) ಕೂಜುಗೋಡು, ಸುಬ್ರಹ್ಮಣ್ಯ ಆಯೋಜಿಸಿರುವ ಎ.4 ರಿಂದ ಎ.11 ರವರೆಗೆ ಹರಿಹರೇಶ್ವರ ದೇವಾಲಯದಲ್ಲಿ ನಡೆಯಲಿರುವ ಮಕ್ಕಳ ಬೇಸಿಗೆ ಶಿಬಿರ ಕಲರವ ಎ.04 ರಂದು ಉದ್ಘಾಟನೆಗೊಂಡಿತು ಹರಿಹರ ದೇವಾಲಯದ ವ್ಯವಸ್ಥಾಪನ ಸಮಿತಿ ಸದಸ್ಯ ಶ್ರೀಯುತ ಚಂದ್ರಹಾಸ ಶಿವಾಲ ದೀಪ ಬೆಳಗಿ ಶಿಬಿರವನ್ನು ಉದ್ಘಾಟಿಸಿದರು. ಹರಿಹರ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಕಿಶೋರ್ ಕುಮಾರ್ ಕೂಜುಗೋಡು ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸುಬ್ರಹ್ಮಣ್ಯ ಐನಕಿದು ಪ್ರಾ. ಕೃ.ಪ.ಸ. ಸಂಘದ ನಿರ್ದೇಶಕರಾದ ಜಯಪ್ರಕಾಶ್ ಕೂಜುಗೋಡು, ಹ–ರಿಹರೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಶ್ರೀಮತಿ ರೇಷ್ಮಾ ಪ್ರಕಾಶ್ ಕಟ್ಟೆಮನೆ, ವಕೀಲರಾದ ಮಧುಸೂದನ್ ಕಾಪಿಕಾಡು ಉಪಸ್ಥಿತ–ರಿದ್ದರು. ಶಿಬಿರದ ಸಂಯೋಜಕಿ ಶ್ರೀಮತಿ ವನಿತಾ, ಉದಯ್ ಕೂಜುಗೋಡು ಕಾರ್ಯಕ್ರಮ ನಿರೂಪಿಸಿದರು. ಸಂಪನ್ಮೂಲ ವ್ಯಕ್ತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕಾಯರ್ತೋಡಿ ವರದಾಯಿನಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಶ್ರಮದಾನ



ಕಾಯರ್ತೋಡಿ ವರದಾಯಿನಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಏ 11 ಮತ್ತು 12 ರಂದು ನಡೆಯಲಿರುವ ವಾರ್ಷಿಕೋತ್ಸವ ದ ಪ್ರಯುಕ್ತ ಎ.06ರಂದು ಶ್ರಮದಾನ ನಡೆಯಿತು.

## ಪಂಜ : ಯುವ ತೇಜಸ್ಸು ಬಳಗದಿಂದ ಸಹಾಯಧನ ಹಸ್ತಾಂತರ



ಐವತೊಕ್ಲು ಗ್ರಾಮದ ಪಲ್ಲೋಡಿ ನಿವಾಸಿ ,ಮೀನಾಕ್ಷಿ ಇವರು ಕಳೆದ ಒಂದು ವರ್ಷದಿಂದ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದು ಇವರ ಚಿಕಿತ್ಸೆಗಾಗಿ ಯುವ ತೇಜಸ್ಸು ಬಳಗದಿಂದ ಆರ್ಥಿಕ ಸಹಾಯಧನದ 12000/– ಚೆಕ್ ಅನ್ನು ಮಾ.16ರಂದು ಅವರ ನಿವಾಸದಲ್ಲಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಯುವ ತೇಜಸ್ಸು ಬಳಗದ ಸದಸ್ಯರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಮಟ್ಟದ ಮ್ಯಾನೇಜ್ಮೆಂಟ್ ಅಂಡ್ ಕಲ್ಚರ್ ಫೆಸ್ಟಿವಲ್ ನಲ್ಲಿ ಕೆ.ಎಸ್.ಎಸ್ ಕಾಲೇಜಿಗೆ ಬಹುಮಾನ



ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮಂಗಳೂರು ಅವರು ಆಯೋಜಿಸಿರುವ ರಾಷ್ಟ್ರೀಯ ಮಟ್ಟದ ಮ್ಯಾನೇಜ್ಮೆಂಟ್ ಹಾಗೂ ಕಲ್ಚರಲ್ ಫೆಸ್ಟಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಬ್ರಾಂಡ್ ರಂಗೋಲಿ ಸ್ಪರ್ಧೆಯಲ್ಲಿ ಸಿಂಚನ ಪಿ ಹಾಗೂ ಭಾರತಿ ಎಂ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಶ್ರೀ ಧರ್ಮಸ್ಥಳ ಮಂಜುನಾಥ–ೇಶ್ವರ ಕಾಲೇಜ್ (ಸ್ವಾಯತ್ತ) ಉಜಿರೆ, ಆಯೋಜಿಸಿದಂತಹ ರಾಷ್ಟ್ರೀಯ ಮಟ್ಟದ ಅಂತರ್ ಕಾಲೇಜು ಕಾಮರ್ಸ್ ಹಾಗೂ ಮ್ಯಾನೇಜ್ಮೆಂಟ್ ಫೆಸ್ಟ್ ನಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಮುಖ ವರ್ಣಿಕೆ ಸ್ಪರ್ಧೆಯಲ್ಲಿ ದೀಕ್ಷಾ ಎಂ ಕೆ ಹಾಗೂ ರಶ್ಮಿ ಎನ್ ಎಲ್ ಅವರು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

## ರಶ್ಮಿ ನೆಕ್ಕಿಲರಿಗೆ 3ನೇ ರ್‍ಯಾಂಕ್



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದ 20ನೇ ಘಟಿಕೋತ್ಸವದಲ್ಲಿ ಸಂಪಾಜೆ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಕುಮಾರಿ ರಶ್ಮಿರವರು ಇತಿಹಾಸ ವಿಭಾಗದಲ್ಲಿ ಮೈಸೂರು ಮುಕ್ತ ವಿಶ್ವವಿದ್ಯಾನಿಲಯಕ್ಕೆ 3ನೇ ರ್‍ಯಾಂಕ್ ಪಡೆದಿದ್ದಾರೆ ಇವರು ಕಲ್ಲುಗುಂಡಿ ದಂಡೆಕಜೆಯ ನೆಕ್ಕಿಲ ಶ್ರೀ ಎಲ್ಯಣ್ಣ ಗೌಡ ಹಾಗೂ ಶ್ರೀಮತಿ ನಳಿನಿ ದಂಪತಿಗಳ ದ್ವಿತೀಯ ಪುತ್ರಿಯಾಗಿದ್ದು, 1ನೇ ತರಗತಿಯಿಂದ 7ನೇ ತರಗತಿಯವರೆಗೆ ಕಲ್ಲುಗುಂಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದು, ಸಂಪಾಜೆ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ 8ನೇ ತರಗತಿಯಿಂದ ದ್ವಿತೀಯ ಪಿಯುಸಿಯವರೆಗೆ ಓದಿರುತ್ತಾರೆ. ಸುಳ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಃ ಂ ಪದವಿ ಪಡೆದು ಮಂಗಳೂರಿನಲ್ಲಿ ಶಿಕ್ಷಕರ ತರಬೇತಿಯ ಃ.ಇಜ., ಪದವಿ ಪಡೆದು ಪ್ರಸ್ತುತ ಹಾಸನದಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ

## ಮಡಪ್ಪಾಡಿ ಕಾಶಿ ನಡುಬೆಟ್ಟು ಕಡಿದಾದ ದಿಣ್ಣೆ(ಚಡಾವು) ತಗ್ಗಿಸುವ ಕಾರ್ಯಕ್ಕೆ ಗುದ್ದಲಿ ಪೂಜೆ



ಮಡಪ್ಪಾಡಿಯಿಂದ ಕಾಶಿ ನಡುಬೆಟ್ಟು ಮನೆಗಳಿಗೆ ಸಂಪರ್ಕಿಸುವ ರಸ್ತೆಯು ಹಲವು ವರ್ಷಗಳಿಂದ ತೀರ ಹದಗೆಟ್ಟಿದ್ದು, ಆ ರಸ್ತೆಯ ಫಲಾನುಭವಿಗಳ ಬಹು ಬೇಡಿಕೆಗೆ ಸ್ಪಂದಿಸಿ ಮಾನ್ಯ ಶಾಸಕರಿಗೆ ಮಡಪ್ಪಾಡಿ ಗ್ರಾಮ ಸಮಿತಿ ಕಡೆಯಿಂದ ಬಿಜೆಪಿ ಜಿಲ್ಲಾಕಾರ್ಯದರ್ಶಿ ವಿನಯ್ ಕುಮಾರ್ ಮುಳುಗಾಡು ನೇತೃತ್ವದಲ್ಲಿ ಮನವಿ ಸಲ್ಲಿಸಿ ಶಾಸಕರ ವಿಶೇಷ ಅನುದಾನವನ್ನು ತ–ರಿಸಿಕೊಂಡು ಮಡಪ್ಪಾಡಿ – ಕಾಶಿ– ನಡುಬೆಟ್ಟು ರಸ್ತೆಯಲ್ಲಿ ಫಲಾನುಭವಿಗಳ ಬಹು ಬೇಡಿಕೆಯ ಮತ್ತು ಕಡಿದಾದ (ಚಡಾವು) ದಿಣ್ಣೆಯನ್ನೂ ತಗ್ಗಿಸುವ ಕಾರ್ಯಕ್ಕೆ ಇವತ್ತಿನ ದಿನ ಗುದ್ದಲಿ ಪೂಜೆ ನೆರವೇರಿಸಲಾಯಿತು.

## ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಸಭೆ – ಸಂಘಟನೆ ಬಲಪಡಿಸಲು ತೀರ್ಮಾನ



ಸುಳ್ಯ ಬ್ಲಾಕ್ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಇದರ ಸಭೆ ಎ. 5ರಂದು ಸುಳ್ಯದ ಯುವಜನ ಸಂಯುಕ್ತ ಮಂಡಳಿ ಸಭಾಂಗಣದಲ್ಲಿ ನಡೆಯಿತು.

ಸುಳ್ಯ ಬ್ಲಾಕ್ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷ ಜಯಪ್ರಕಾಶ್ ನೆಕ್ರಪ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ದ.ಕ ಜಿಲ್ಲಾ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷರಾದ ಶುಭಾಶ್ಚಂದ್ರ ಕೊಳ್ನಾಡು ಮಾತನಾಡಿ ಪಂಚಾಯತ್ ರಾಜ್ ಸಂಘಟನೆಯನ್ನು ಗ್ರಾಮ ಮಟ್ಟದಲ್ಲಿ ಬಲಿಷ್ಠ ಗೊಳಿಸಲು ಕಾರ್ಯಪಡೆ ರಚಿಸುವ ಬಗ್ಗೆ ಮತ್ತು ತಾಲೂಕು ಸಮಿತಿಯನ್ನು ಬಲಿಷ್ಠ ವಾಗಿ ಸಂಘಟಿಸುವ ಬಗ್ಗೆ ಮಾರ್ಗದರ್ಶನ ನೀಡಿದರು. ಶೀಘ್ರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವ ಹಿನ್ನಲೆಯಲ್ಲಿ ಗ್ರಾಮ ಪಂಚಾಯತ್ ಪ್ರತಿನಿಧಿಗಳು, ಮಾಜಿ ಸದಸ್ಯರು, ಪರಾಜಿತ ಅಭ್ಯರ್ಥಿ ಗಳ ಸಮಾವೇಶ ಮತ್ತು ಕಾರ್ಯಗಾರ ನಡೆಸುವ ಬಗ್ಗೆ ಸಲಹೆ ನೀಡಿದರು. ವೇದಿಕೆಯಲ್ಲಿ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಭವಾನಿಶಂಕರ್ ಕಲ್ಮಡ್ಕ, ಜಿಲ್ಲಾ ಸದಸ್ಯ ಅಶೋಕ್ ಚೂಂತಾರು ಉಪಸ್ಥಿತರಿದ್ದರು. ಸಂಘಟನೆಯ ಗ್ರಾಮ ಪಂಚಾಯತ್ ಮಟ್ಟದ ಪ್ರತಿನಿಧಿಗಳು ಭಾಗವಹಿಸಿದ್ದರು. ಭವಾನಿಶಂಕರ್ ಕಲ್ಮಡ್ಕ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಅಶೋಕ್ ಚೂಂತಾರು ವಂದಿಸಿದರು.

## ಐವರ್ನಾಡು : ಮಾಸಿಕ ಸ್ವಚ್ಛತಾ ಕಾರ್ಯಕ್ರಮ



ಐವರ್ನಾಡು ಗ್ರಾಮ ಪಂಚಾಯತ್ ವತಿಯಿಂದ ನಡೆಯುವ ಮಾಸಿಕ ಸ್ವಚ್ಛತಾ ಕಾರ್ಯಕ್ರಮವು ಐವರ್ನಾಡು ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ದ ವ್ಯವಸ್ಥಾಪನ ಸಮಿತಿಯ ಸಹಯೋಗದೊಂದಿಗೆ ಐವರ್ನಾಡು ಗ್ರಾಮ ಪಂಚಾಯತ್ ವಠಾರ ಹಾಗೂ ಮುಖ್ಯ ರಸ್ತೆ ಯ ಬದಿಯಲ್ಲಿ ಐವರ್ನಾಡು ಗ್ರಾಮ ಪಂಚಾಯತ್ ವಠಾರದಿಂದ ಮರ್ವತ್ತಡ್ಕದವರೆಗೆ ನಡೆಯಿತು. ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ ಐವರ್ನಾಡು ಗ್ರಾಮ ಪಂಚಾಯತ್ ನ ಅಧ್ಯಕ್ಷರು, ಸದಸ್ಯರು, ಐವರ್ನಾಡು ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರು, ಸದಸ್ಯರು, ಐವರ್ನಾಡು ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿಗಳು, ಊರಿನ ಪ್ರಮುಖರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದರು.ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯವರು ಲಘು ಉಪಹಾರದ ವ್ಯವಸ್ಥೆ ಮಾಡಿದರು.

ವರದಿ, ಕಥೆ, ಜಾಹೀರಾತು, ಕವನ
ಲೇಖನಗಳನ್ನು ಕಳುಹಿಸಿಕೊಡಿ
WWW.amarasuddi@gmail.com
ಕ್ಷಣ ಕ್ಷಣದ ಸುದ್ದಿಗಾಗಿ ವೀಕ್ಷಿಸಿ
WWW.amarasuddi.com








## ನಿಂತಿಕಲ್ಲು : ಮದರಸ ಪ್ರಾರಂಬೋತ್ಸವ ಪತ್ಹೇ ಮುಭಾರಕ್

ಸಮಸ್ತ ಕೇರಳ ಸುನ್ನಿ ವಿದ್ಯಾಭ್ಯಾಸ ಬೋರ್ಡ್ ಇದರ ಅಧೀನದಲ್ಲಿ ಕಾರ್ಯಾಚರಿಸುತ್ತಿರುವ ನಿಂತಿಕಲ್ಲು ಸಿರಾಜುಲ್ ಉಲೂಂ ಮದರಸದ ಮದರಸ ಪ್ರಾರಂಬೋತ್ಸವ ಪತ್ಹೇ ಮುಭಾರಕ್ ಕಾರ್ಯಕ್ರಮವು ದಿನಾಂಕ ಎಪ್ರಿಲ್ 9 ರಂದು ಮದರಸ ಸಭಾಂಗಣದಲ್ಲಿ ನಡೆಯಿತು. ಜಮಾಅತ್ ಖತೀಬ್ ಜಾಫರ್ ಸಹದಿ ಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಧಾರ್ಮಿಕ ಶಿಕ್ಷಣದ ಮಹತ್ವಗಳ



ಕುರಿತು ಮಾತನಾಡಿದರು. ಮುಹದ್ದಿನ್ ಮುಸ್ತಫಾ ಝುಹರಿ , ಆಡಳಿತ ಸಮಿತಿ ಅಧ್ಯಕ್ಷ ಅಬ್ದುಲ್ ಗಫೂರ್, ಉಪಾಧ್ಯಕ್ಷ ಇಬ್ರಾಹಿಂ ಕಜೆ ಕಾರ್ಯದರ್ಶಿ ಶರೀಫ್ ಜಿ , ಸಮಿತಿ ಪದಾಧಿಕಾರಿಗಳು , ಜಮಾಅತರು, ವಿಧ್ಯಾರ್ಥಿಗಳು , ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ಸಿಹಿ ವಿತರಿಸಲಾಯಿತು.

## ಚೇರು ಶಾಲಾ ಪ್ರಭಾರ ಮುಖ್ಯಗುರು ದಮಯಂತಿ ಜಿ ಸೇವಾ ನಿವೃತ್ತಿ

ಚೇರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯಗುರು ಒಗ್ಗು ಬಿಳಿನೆಲೆಯ ದಮಯಂತಿ ಅವರು ಮಾ.31ರಂದು ಸೇವಾ ನಿವೃತ್ತಿ ಹೊಂದಲಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸುಮಾರು 30 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ದಮಯಂತಿ ಜಿ ಅವರು 1994 ಸೆಪ್ಟೆಂಬರ್ ನಲ್ಲಿ ತನ್ನ ಶಿಕ್ಷಣ ವೃತ್ತಿಯನ್ನು ಆರಂಭಿಸಿ, ವಿದ್ಯಾಬೋಧಿನಿ ಹಿರಿಯ ಪ್ರಾಥಮಿಕ ಶಾಲೆ ಬಾಳಿಲ, ಸ. ಹಿ.ಪ್ರಾ. ಶಾಲೆ ಸುರಂಬೈಲು, ಸ. ಹಿ. ಪ್ರಾ. ಶಾಲೆ ಪುತ್ತಿಲ ಬೈಲಡ್ಕ, ಸ. ಹಿ. ಪ್ರಾ. ಶಾಲೆ ಬಿಳಿನೆಲೆ ಬೈಲು ಇಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ,



ಪ್ರಸ್ತುತ ಚೇರು ಸ.ಕಿ.ಪ್ರಾ. ಶಾಲೆಯಲ್ಲಿ ಪ್ರಭಾರ ಮುಖ್ಯಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಗುತ್ತಿಗಾರು ಲಯನ್ಸ್ ಕ್ಲಬ್ ಗೆ ಪ್ರಾಂತೀಯ ಅಧ್ಯಕ್ಷರ ಭೇಟಿ ; ವಿವಿಧ ಕಾರ್ಯಕ್ರಮ

ಗುತ್ತಿಗಾರು ಲಯನ್ಸ್ ಕ್ಲಬ್ ಗೆ ಲಯನ್ಸ್ ಪ್ರಾಂತೀಯ ಅಧ್ಯಕ್ಷರ ಭೇಟಿ ಕಾರ್ಯಕ್ರಮವು ಇತ್ತೀಚೆಗೆ ಗುತ್ತಿಗಾರು ಲಯನ್ಸ್ ಸಭಾಭವನದಲ್ಲಿ ನಡೆಯಿತು. ಗುತ್ತಿಗಾರು ಲಯನ್ಸ್ ಕ್ಲಬ್ ಅಧ್ಯಕ್ಷರಾದ ಲI ಕುಶಾಲಪ್ಪ ತುಂಬತ್ತಾಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತೀಯ ಅಧ್ಯಕ್ಷರಾದ ಲI



ಗಂಗಾಧರ ರೈ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಲI ಸನತ್ ಮುಳುಗಾಡು ಹಾಗೂ ಸರೋಜಿನಿ ಗಂಗಯ್ಯ ಮುಳುಗಾಡು ಇವರಿಂದ ನೆರಳಾಡಿ ದೈವಸ್ಥಾನಕ್ಕೆ ಊಟದ ತಟ್ಟೆ ಕೊಡುಗೆ, ಲI ನಿತ್ಯಾನಂದ ಮುಂಡೋಡಿ, ಲI ಪಿ.ಸಿ ಜಯರಾಮ್, ಲI ಕುಶಾಲಪ್ಪ ತುಂಬತ್ತಾಜೆ, ಲI ಲೋಕಪ್ಪ ಶೀರಡ್ಕ ಲI ಆನಂದ ಅಂಬೆಕಲ್ಲು ಅವರಿಂದ ಮಡಪ್ಪಾಡಿ ಸ.ಹಿ.ಪ್ರಾ ಶಾಲೆಗೆ ಊಟದ ತಟ್ಟೆ ಕೊಡುಗೆ, ಲI ವಿಜಯಕುಮಾರ್.ಎಂ.ಡಿ ಅವರಿಂದ ಬೆಂಡೋಡಿ ಅಂಗನವಾಡಿ ಶಾಲೆಗೆ ಗೋದ್ರೇಜ್ ಕೊಡುಗೆ, ಪಾಶ್ವವಾಯು ವಿನಿಂದ ಬಳಲುತ್ತಿರುವ ದೇವಿಕಾ ಗುತ್ತಿಗಾರು ಇವರಿಗೆ ಧನ ಸಹಾಯ ಹಾಗೂ ಲI ಸರೋಜಿನಿ ಗಂಗಯ್ಯ ಅವರಿಂದ ಗುತ್ತಿಗಾರಿನ ಅಮರ ತಾಲೂಕು ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಗೆ ಧನಸಹಾಯ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಲI ರೇಣುಕಾ ಸದಾನಂದ, ಜಾಕೆ ವಲಯ ಅಧ್ಯಕ್ಷರಾದ ರೂಪಾಶ್ರೀ.ಜೆ ರೈ ಹಾಗೂ ಅಮೃತ ಅಪ್ಪಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಲI ಬಿಟ್ಟಿ ನಿಡುನೀಲಂ ಸ್ವಾಗತಿಸಿ ವೆಂಕಪ್ಪ ಕೇನಾಜೆ ವರದಿ ವಾಚಿಸಿದರು, ಲI ಪುರುಷೋತ್ತಮ ಮಣಿಯಾನ ಧನ್ಯವಾದ ಸಮರ್ಪಣೆ ಮಾಡಿದರು.












Printed, Published & Edited by Muralidhara A, Owned by Muralidhara A, Addanapare House, P.O & Villege Guthigar, Sullia Taluk D.K , Published from 2nd Floor, Vinayaka Complex, Carstreet Sullia, D.K 574239 & Printed at Digantha Mudrana Ltd, Manglore D.K.